# ಇಲಾಖೆಯಲ್ಲಿ ಅನುಷ್ಠಾನ ಮಾಡುತ್ತಿರುವ ಕಾರ್ಯಕ್ರಮಗಳ ವಿವರ
## (ರಾಜ್ಯ / ಜಿಲ್ಲಾ / ತಾಲ್ಲೂಕು ಮಟ್ಟಗಳಲ್ಲಿ)

**ಪರಿಶಿಷ್ಟ ಜಾತಿ ಉಪ ಯೋಜನೆ** :

| ಕ್ರ. ಸಂ. | ಯೋಜನೆ / ಕಾರ್ಯಕ್ರಮದ ಹೆಸರು | ಯೋಜನೆ / ಕಾರ್ಯಕ್ರಮದ ಸಂಕ್ಷಿಪ್ತ ವಿವರ | ಮಂಜೂರು / ಅನುಷ್ಠಾನ / ಉಸ್ತುವಾರಿ ಮಾಡುವ ಪ್ರಾಧಿಕಾರ | ಅರ್ಹತಾ ಮಾನದಂಡ | ಅವಶ್ಯವಿರುವ ದಾಖಲಾತಿಗಳು | ಅರ್ಹತಾ ಅವಧಿ | ಷರಾ |
|---|---|---|---|---|---|---|---|
| 1 | ಪರಿಶಿಷ್ಟ ಜಾತಿ ಉಪ ಯೋಜನೆಯ (ಪ.ಜಾ.ಉ.ಯೋ) ಅನುಷ್ಠಾನ ಮತ್ತು ಉಸ್ತುವಾರಿ | ಅನುಷ್ಠಾನ :<br>• ಕರ್ನಾಟಕ ರಾಜ್ಯದಲ್ಲಿ ಕ್ಷೇತ್ರೀಯ ವಿಧಾನ **(sectoral approach)** ವನ್ನು ಅನುಸರಿಸಿ ಪ.ಜಾ.ಉ.ಯೋ ಗೆ ರಾಜ್ಯ ಯೋಜನಾ ಗಾತ್ರದ ಅನುದಾನವನ್ನು ಆಧರಿಸಿ ಯೋಜನಾ ಆಯೋಗದ ಮಾರ್ಗಸೂಚಿಯನ್ವಯ ಹಂಚಿಕೆ ಮಾಡಲಾಗುತ್ತದೆ. ರಾಜ್ಯ ಸರ್ಕಾರದಿಂದ ಅನುದಾನವನ್ನು ಪ.ಜಾ.ಉ.ಯೋ ಮತ್ತು ಗಿ.ಉ.ಯೋ ಯಡಿ ಪ.ಜಾತಿ ಮತ್ತು ಪ.ಪಂಗಡದ ಶೇಕಡವಾರು ಜನಸಂಖ್ಯೆಗನುಗುಣವಾಗಿ ಹಂಚಿಕೆ ಮಾಡಲಾಗುತ್ತದೆ.<br>• ಪರಿಶಿಷ್ಟ ಜಾತಿ ಉಪ ಯೋಜನೆಯಡಿ ವಿವಿಧ ಅಭಿವೃದ್ಧಿ ಇಲಾಖೆಗಳ ಮೂಲಕ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲಾಗುತ್ತಿದೆ.<br>• ಸಮಾಜ ಕಲ್ಯಾಣ ಇಲಾಖೆಯು ಪ.ಜಾ.ಉ.ಯೋ ಯಡಿ ಕಾರ್ಯಕ್ರಮಗಳ ಅನುಷ್ಠಾನ ಮತ್ತು ಉಸ್ತುವಾರಿ ಮಾಡುವ ನೋಡಲ್ ಇಲಾಖೆಯಾಗಿರುತ್ತದೆ. | ಮಂಜೂರಾತಿ ಪ್ರಾಧಿಕಾರ ಸಂಬಂಧಿಸಿದ ಅಭಿವೃದ್ಧಿ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು<br><br>ಅನುಷ್ಠಾನಾಧಿಕಾರಿಗಳು ಇಲಾಖಾ ಮುಖ್ಯಸ್ಥರು<br><br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ರವರು ಉಸ್ತುವಾರಿ ಪ್ರಾಧಿಕಾರ | - | - | ಆರ್ಥಿಕ ವರ್ಷದೊಳಗಾಗಿ | ಯಾವುದೇ ದೂರುಗಳನ್ನು ಸಂಬಂಧಿಸಿದ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮತ್ತು ಅಭಿವೃದ್ಧಿ ಇಲಾಖೆಗಳ ಜಿಲ್ಲಾ ಅಧಿಕಾರಿಗಳನ್ನು ಸಂಪರ್ಕಿಸಬಹುದು<br><br>ಜಿಲ್ಲಾ ಮಟ್ಟದಲ್ಲಿ ಪರಿಹಾರ ದೊರಕದೆ ಇದ್ದಲ್ಲಿ ಸಂಬಂಧಿಸಿದ ಇಲಾಖಾ ಮುಖ್ಯಸ್ಥರು / ಅಭಿವೃದ್ಧಿ ಇಲಾಖೆಗಳ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳನ್ನು ಸಂಪರ್ಕಿಸಬಹುದು |

| ಕ್ರ. ಸಂ. | ಯೋಜನೆ / ಕಾರ್ಯಕ್ರಮದ ಹೆಸರು | ಯೋಜನೆ / ಕಾರ್ಯಕ್ರಮದ ಸಂಕ್ಷಿಪ್ತ ವಿವರ | ಮಂಜೂರು / ಅನುಷ್ಠಾನ / ಉಸ್ತುವಾರಿ ಮಾಡುವ ಪ್ರಾಧಿಕಾರ | ಅರ್ಹತಾ ಮಾನದಂಡ | ಅವಶ್ಯವಿರುವ ದಾಖಲಾತಿಗಳು | ಅರ್ಹತಾ ಅವಧಿ | ಷರಾ |
|---|---|---|---|---|---|---|---|
| | | • ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರವರ ಅಧ್ಯಕ್ಷತೆಯಲ್ಲಿ ನಡೆಯುವ ಅಧಿಕಾರಯುಕ್ತ ಸಮಿತಿ ಸಭೆಯಲ್ಲಿ ಎಲ್ಲಾ ಅಭಿವೃದ್ಧಿ ಇಲಾಖೆಗಳು ಸಲ್ಲಿಸುವ ಕ್ರಿಯಾ ಯೋಜನೆಗಳಿಗೆ ಅನುಮೋದನೆ ನೀಡಲಾಗುತ್ತದೆ.<br><br>• ಕಾರ್ಯಕ್ರಮಗಳ ಅನುಮೋದನೆಯಾದ ನಂತರ ಸಂಬಂಧಿಸಿದ ಅಭಿವೃದ್ಧಿ ಇಲಾಖೆಗಳು ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲಾಗುವುದು.<br><br>• ಪ್ರತಿ ತಿಂಗಳು ಸಮಾಜ ಕಲ್ಯಾಣ ಇಲಾಖೆಯು ಇತರೆ ಅಭಿವೃದ್ಧಿ ಇಲಾಖೆಗಳ ಸಹಯೋಗದೊಂದಿಗೆ ಪ.ಜಾ.ಉ.ಯೋ ಯಡಿ ಸಾಧಿಸಿದ ಪ್ರಗತಿ ವರದಿಗಳನ್ನು ಪಡೆದು ಕ್ರೋಢೀಕರಿಸಿ ಯೋಜನಾ ಇಲಾಖೆ / ಆರ್ಥಿಕ ಇಲಾಖೆಗೆ ಸಲ್ಲಿಸಲಾಗುವುದು.<br><br>ಉಸ್ತುವಾರಿ :<br><br>• ವಿವಿಧ ಅಭಿವೃದ್ಧಿ ಇಲಾಖೆಗಳು ಪ.ಜಾ.ಉ.ಯೋ ಯಡಿ ಅನುಷ್ಠಾನ ಮಾಡಿದ ಕಾರ್ಯಕ್ರಮಗಳನ್ನು ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಸಮಿತಿಯಲ್ಲಿ ಪರಿಶೀಲಿಸಿ ಹಾಗೂ ಉಸ್ತುವಾರಿ ಮಾಡಲಾಗುತ್ತದೆ. | | | | | |

| ಕ್ರ. ಸಂ. | ಯೋಜನೆ / ಕಾರ್ಯಕ್ರಮದ ಹೆಸರು | ಯೋಜನೆ / ಕಾರ್ಯಕ್ರಮದ ಸಂಕ್ಷಿಪ್ತ ವಿವರ | ಮಂಜೂರು / ಅನುಷ್ಠಾನ / ಉಸ್ತುವಾರಿ ಮಾಡುವ ಪ್ರಾಧಿಕಾರ | ಅರ್ಹತಾ ಮಾನದಂಡ | ಅವಶ್ಯವಿರುವ ದಾಖಲಾತಿಗಳು | ಅರ್ಹತಾ ಅವಧಿ | ಷರಾ |
|---|---|---|---|---|---|---|---|
| | | ರಾಜ್ಯ ಮಟ್ಟ :<br><br>• ರಾಜ್ಯ ಮಟ್ಟದಲ್ಲಿ ನಡೆಯುವ ಪ್ರತಿ ತ್ರೈಮಾಸಿಕ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮ (**KDP**) ಸಭೆಯಲ್ಲಿ ಪ.ಜಾ.ಉ.ಯೋ ಯಡಿ ವಿವಿಧ ಅಭಿವೃದ್ಧಿ ಇಲಾಖೆಗಳ ಪ್ರಗತಿ ವರದಿಯನ್ನು ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಂದ ಪರಿಶೀಲಿಸಲಾಗುವುದು.<br><br>• ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರವರು ನಡೆಸುವ ಅಧಿಕಾರಯುಕ್ತ ಸಮಿತಿ ಸಭೆಯಲ್ಲಿ ಅಭಿವೃದ್ಧಿ ಇಲಾಖೆಗಳ ಪ್ರಗತಿ ವರದಿಯನ್ನು ಪರಿಶೀಲಿಸಲಾಗುತ್ತದೆ. ಸಮಿತಿಯನ್ನು ಕಾರ್ಯಕ್ರಮಗಳ ಪರಿಶೀಲನೆ / ಅನುಮೋದನೆ / ಉಸ್ತುವಾರಿ ಮಾಡಲು ರಚಿಸಲಾಗಿದೆ.<br><br>• ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ರವರು ಅಭಿವೃದ್ಧಿ ಇಲಾಖೆಗಳ ಪ್ರಗತಿಯನ್ನು ಪ್ರತಿ ತಿಂಗಳು ನಡೆಯುವ ಎಂ.ಪಿಕ್ ಸಭೆಯಲ್ಲಿ ಪರಿಶೀಲಿಸಲಾಗುವುದು.<br><br>• ಎಲ್ಲಾ ಅಭಿವೃದ್ಧಿ ಇಲಾಖೆಗಳ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು ಆಯಾ ಇಲಾಖೆಗಳು ನಡೆಸುವ ಎಂ.ಪಿಕ್ ಸಭೆಯಲ್ಲಿ ಪ.ಜಾ.ಉ.ಯೋ ಕಾರ್ಯಕ್ರಮಗಳ ಪ್ರಗತಿಯನ್ನು ಪರಿಶೀಲಿಸಲಾಗುವುದು. | | | | | |

| ಕ್ರ. ಸಂ. | ಯೋಜನೆ / ಕಾರ್ಯಕ್ರಮದ ಹೆಸರು | ಯೋಜನೆ / ಕಾರ್ಯಕ್ರಮದ ಸಂಕ್ಷಿಪ್ತ ವಿವರ | ಮಂಜೂರು / ಅನುಷ್ಠಾನ / ಉಸ್ತುವಾರಿ ಮಾಡುವ ಪ್ರಾಧಿಕಾರ | ಅರ್ಹತಾ ಮಾನದಂಡ | ಅವಶ್ಯವಿರುವ ದಾಖಲಾತಿಗಳು | ಅರ್ಹತಾ ಅವಧಿ | ಷರಾ |
|---|---|---|---|---|---|---|---|
| | | • ಮಾನ್ಯ ಸಮಾಜ ಕಲ್ಯಾಣ ಸಚಿವರು ಎಲ್ಲಾ ಅಭಿವೃದ್ಧಿ ಇಲಾಖೆಗಳ ಪ್ರಗತಿ ವರದಿಗಳನ್ನು ಅವಶ್ಯಕತೆಗನುಗುಣವಾಗಿ ಪರಿಶೀಲಿಸುತ್ತಾರೆ.<br>• ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆಯುವ ಉನ್ನತ ಮಟ್ಟದ ಸಮಿತಿ ಸಭೆಯಲ್ಲಿಯೂ ಸಹ ಅಭಿವೃದ್ಧಿ ಇಲಾಖೆಗಳ ಕಾರ್ಯಕ್ರಮಗಳ ಪ್ರಗತಿ ವರದಿಗಳನ್ನು ಅವಶ್ಯಕತೆಗನುಗುಣವಾಗಿ ಪರಿಶೀಲಿಸುತ್ತಾರೆ.<br>ಜಿಲ್ಲಾ ಮಟ್ಟ :<br>• ಜಿಲ್ಲಾಧಿಕಾರಿಗಳು / ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ರವರ ಅಧ್ಯಕ್ಷತೆಯಲ್ಲಿ ನಡೆಯುವ ಜಿಲ್ಲಾ ಮಟ್ಟದ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮ (**KDP**) ಮಾಸಿಕ ಸಭೆಯಲ್ಲಿ ಪ.ಜಾ.ಉ.ಯೋ ಯಡಿ ವಿವಿಧ ಅಭಿವೃದ್ಧಿ ಇಲಾಖೆಗಳ ಪ್ರಗತಿ ವರದಿಯನ್ನು ಪರಿಶೀಲಿಸಲಾಗುವುದು.<br>ತಾಲ್ಲೂಕು ಮಟ್ಟ :<br>• ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಯುವ ತಾಲ್ಲೂಕು ಮಟ್ಟದ ಮಾಸಿಕ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮ (**KDP**) ಮಾಸಿಕ ಸಭೆಯಲ್ಲಿ ಪ.ಜಾ.ಉ.ಯೋ ಯಡಿ ವಿವಿಧ ಅಭಿವೃದ್ಧಿ ಇಲಾಖೆಗಳ ಪ್ರಗತಿ ವರದಿಯನ್ನು ಪರಿಶೀಲಿಸಲಾಗುವುದು. | | | | | |

| ಕ್ರ. ಸಂ. | ಯೋಜನೆ / ಕಾರ್ಯಕ್ರಮದ ಹೆಸರು | ಯೋಜನೆ / ಕಾರ್ಯಕ್ರಮದ ಸಂಕ್ಷಿಪ್ತ ವಿವರ | ಮಂಜೂರು / ಅನುಷ್ಠಾನ / ಉಸ್ತುವಾರಿ ಮಾಡುವ ಪ್ರಾಧಿಕಾರ | ಅರ್ಹತಾ ಮಾನದಂಡ | ಅವಶ್ಯವಿರುವ ದಾಖಲಾತಿಗಳು | ಅರ್ಹತಾ ಅವಧಿ | ಷರಾ |
|---|---|---|---|---|---|---|---|
| 2 | ಪ.ಜಾ.ಉ.ಯೋ ಕ್ರೋಢೀಕೃತ ಅನುದಾನದ ಹಂಚಿಕೆ | • ಸಮಾಜ ಕಲ್ಯಾಣ ಇಲಾಖೆಗೆ ಹಂಚಿಕೆ ಮಾಡಿದ ಕ್ರೋಢೀಕೃತ ಅನುದಾನವನ್ನು ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಡಾ॥ ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಡಾ॥ ಬಾಬು ಜಗಜೀವನರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಕರ್ನಾಟಕ ರಾಜ್ಯ ಹಣಕಾಸು ನಿಗಮ ಮುಂತಾದವುಗಳಿಂದ ಉಪಯೋಗಿಸಲಾಗುವುದು.<br><br>• ಹಂಚಿಕೆಯಾಗಿರುವ ಕ್ರೋಢೀಕೃತ ಅನುದಾನಕ್ಕೆ ಇಲಾಖೆ / ನಿಗಮಗಳ ಮುಂದುವರೆದ ಕಾರ್ಯಕ್ರಮಗಳು, ಆಯವ್ಯಯದಲ್ಲಿ ಘೋಷಿಸಿದ ಹೊಸ ಕಾರ್ಯಕ್ರಮಗಳು ಮತ್ತು ಇತರೆ ಪ್ರಮುಖ ನೇರ ಪ್ರಯೋಜನವಾಗುವ / ಸಮುದಾಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸಿ ಕ್ರಿಯಾ ಯೋಜನೆಗಳನ್ನು ತಯಾರಿಸಲಾಗುವುದು. | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ರವರು ಮಂಜೂರಾತಿ ಮತ್ತು ಉಸ್ತುವಾರಿ ಪ್ರಾಧಿಕಾರ<br><br>ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಮತ್ತು ಸಂಬಂಧಿಸಿದ ನಿಗಮ / ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕರುಗಳು ಅನುಷ್ಠಾನಾಧಿಕಾರಿಗಳು | - | - | ಆರ್ಥಿಕ ವರ್ಷದೊಳಗಾಗಿ | ಯಾವುದೇ ದೂರುಗಳನ್ನು ಸಂಬಂಧಿಸಿದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ / ಜಿ.ಸ.ಕ.ಅ ರವರನ್ನು ಸಂಪರ್ಕಿಸಬಹುದು<br><br>ಜಿಲ್ಲಾ ಮಟ್ಟದಲ್ಲಿ ಪರಿಹಾರ ದೊರಕದೆ ಇದ್ದಲ್ಲಿ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ / ಸಂಬಂಧಿಸಿದ ಮಂಡಳಿ ಮತ್ತು ನಿಗಮಗಳ ವ್ಯವಸ್ಥಾಪಕ ನಿರ್ದೇಶಕರು / ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ರವರನ್ನು ಸಂಪರ್ಕಿಸಬಹುದು |

| ಕ್ರ. ಸಂ. | ಯೋಜನೆ / ಕಾರ್ಯಕ್ರಮದ ಹೆಸರು | ಯೋಜನೆ / ಕಾರ್ಯಕ್ರಮದ ಸಂಕ್ಷಿಪ್ತ ವಿವರ | ಮಂಜೂರು / ಅನುಷ್ಠಾನ / ಉಸ್ತುವಾರಿ ಮಾಡುವ ಪ್ರಾಧಿಕಾರ | ಅರ್ಹತಾ ಮಾನದಂಡ | ಅವಶ್ಯವಿರುವ ದಾಖಲಾತಿಗಳು | ಅರ್ಹತಾ ಅವಧಿ | ಷರಾ |
|---|---|---|---|---|---|---|---|
| ೩ | ಪರಿಶಿಷ್ಟ ಜಾತಿ ಉಪ ಯೋಜನೆಯ ವಿಶೇಷ ಕೇಂದ್ರೀಯ ನೆರವು **(SCA to SCSP)** | • ರಾಜ್ಯ ಸರ್ಕಾರಕ್ಕೆ ಪರಿಶಿಷ್ಟ ಜಾತಿ ಉಪ ಯೋಜನೆಯ ವಿಶೇಷ ಕೇಂದ್ರೀಯ ನೆರವಿನಡಿ ಪೂರಕವಾಗಿ ಅನುದಾನವನ್ನು ನೀಡಲಾಗುತ್ತಿದೆ.<br>• ಪರಿಶಿಷ್ಟ ಜಾತಿ ಜನಾಂಗದವರಿಗೆ ಇರುವಂತಹ ಕನಿಷ್ಠ ಸಂಪನ್ಮೂಲಗಳಲ್ಲಿ ಅಭಿವೃದ್ಧಿ ಹೊಂದಲು ಆದಾಯ ತರುವಂತಹ ಕಾರ್ಯಕ್ರಮಗಳಿಗೆ ಹೆಚ್ಚಿನ ಒತ್ತು ನೀಡುವುದೇ ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿರುತ್ತದೆ.<br>• ಪ್ರತಿ ವರ್ಷ ಕೇಂದ್ರ ಸರ್ಕಾರವು ಪರಿಶಿಷ್ಟ ಜಾತಿ ಉಪ ಯೋಜನೆಯ ವಿಶೇಷ ಕೇಂದ್ರೀಯ ನೆರವಿನಡಿ ಬಿಡುಗಡೆ ಮಾಡುವ ಅನುದಾನಕ್ಕೆ ನಿರ್ದಿಷ್ಟ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ಅನುದಾನವನ್ನು ಬಿಡುಗಡೆ ಮಾಡಲಾಗುತ್ತದೆ. ವಿವರ ಈ ಕೆಳಕಂಡಂತಿದೆ. | ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ / ವ್ಯವಸ್ಥಾಪಕ ನಿರ್ದೇಶಕರು, ಡಾ॥ ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ / ಪ್ರಾಂಶುಪಾಲರು, ಪರೀಕ್ಷಾ ಪೂರ್ವ ತರಬೇತಿ ಕೇಂದ್ರ ರವರು ಮಂಜೂರಾತಿ / ಅನುಷ್ಠಾನ / ಉಸ್ತುವಾರಿ ಪ್ರಾಧಿಕಾರ | ಸಮಾಜ ಕಲ್ಯಾಣ ಇಲಾಖೆ / ಡಾ॥ ಬಿ.ಆರ್. ಅಂ.ಅ.ನಿ / ಪ.ಪೂ.ತ.ಕೇಂ | ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಇತ್ಯಾದಿ | ಆರ್ಥಿಕ ವರ್ಷದೊಳಗಾಗಿ | ಯಾವುದೇ ದೂರುಗಳನ್ನು ಸಂಬಂಧಿಸಿದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ / ಜಿ.ಸ.ಕ.ಅ ರವರನ್ನು ಸಂಪರ್ಕಿಸಬಹುದು<br>ಜಿಲ್ಲಾ ಮಟ್ಟದಲ್ಲಿ ಪರಿಹಾರ ದೊರಕದೆ ಇದ್ದಲ್ಲಿ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ / ವ್ಯ.ನಿ, ಡಾ॥ ಬಿ.ಆರ್. ಅಂ.ಅ.ನಿ / ಪ್ರಾಂಶುಪಾಲರು, ಪ.ಪೂ.ತ.ಕೇಂ / ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ರವರನ್ನು ಸಂಪರ್ಕಿಸಬಹುದು |

| ಕ್ರ. ಸಂ. | ಯೋಜನೆ / ಕಾರ್ಯಕ್ರಮದ ಹೆಸರು | ಯೋಜನೆ / ಕಾರ್ಯಕ್ರಮದ ಸಂಕ್ಷಿಪ್ತ ವಿವರ | ಮಂಜೂರು / ಅನುಷ್ಠಾನ / ಉಸ್ತುವಾರಿ ಮಾಡುವ ಪ್ರಾಧಿಕಾರ | ಅರ್ಹತಾ ಮಾನದಂಡ | ಅವಶ್ಯವಿರುವ ದಾಖಲಾತಿಗಳು | ಅರ್ಹತಾ ಅವಧಿ | ಷರಾ |
|---|---|---|---|---|---|---|---|
| | | ○ ಶೇ.3 ರಷ್ಟು ಅನುದಾನವನ್ನು ಅಡಳಿತ / ಉಸ್ತುವಾರಿ / ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಕಾರ್ಯಕ್ರಮಕ್ಕೆ ಹಂಚಿಕೆ ಮಾಡಲಾಗುವುದು.<br><br>○ ಶೇ.5 ರಷ್ಟು ಅನುದಾನವನ್ನು ಪರಿಶಿಷ್ಟ ಜಾತಿ ವಿಕಲಚೇತನರು ಆರ್ಥಿಕ ಅಭಿವೃದ್ಧಿ ಹೊಂದುವ (ಸ್ವಯಂ ಉದ್ಯೋಗ) ಕಾರ್ಯಕ್ರಮಕ್ಕಾಗಿ ಉಪಯೋಗಿಸಲಾಗುವುದು.<br><br>○ ಶೇ.10 ರಷ್ಟು ಅನುದಾನವನ್ನು ಪರಿಶಿಷ್ಟ ಜಾತಿ ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯ ಒದಗಿಸುವ ಹಾಗೂ ಇತರೆ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಉಪಯೋಗಿಸಲಾಗುವುದು.<br><br>○ ಶೇ.15 ರಷ್ಟು ಅನುದಾನವನ್ನು ಪರಿಶಿಷ್ಟ ಜಾತಿ ಮಹಿಳೆಯರಿಗೆ ಆದಾಯ ತರುವಂತಹ ಆರ್ಥಿಕ ಅಭಿವೃದ್ಧಿ ಯೋಜನೆ / ಕಾರ್ಯಕ್ರಮಗಳಿಗೆ (ಸ್ವಸಹಾಯ ಗುಂಪುಗಳು / ಸುತ್ತುನಿಧಿ) ಉಪಯೋಗಿಸಲಾಗುವುದು. | | | | | |

| ಕ್ರ. ಸಂ. | ಯೋಜನೆ / ಕಾರ್ಯಕ್ರಮದ ಹೆಸರು | ಯೋಜನೆ / ಕಾರ್ಯಕ್ರಮದ ಸಂಕ್ಷಿಪ್ತ ವಿವರ | ಮಂಜೂರು / ಅನುಷ್ಠಾನ / ಉಸ್ತುವಾರಿ ಮಾಡುವ ಪ್ರಾಧಿಕಾರ | ಅರ್ಹತಾ ಮಾನದಂಡ | ಅವಶ್ಯವಿರುವ ದಾಖಲಾತಿಗಳು | ಅರ್ಹತಾ ಅವಧಿ | ಷರಾ |
|---|---|---|---|---|---|---|---|
| | | ○ ಉಳಿದ ಅನುದಾನವನ್ನು ಸ್ವಯಂ ಉದ್ಯೋಗ / ಕೌಶಲ್ಯ ಅಭಿವೃದ್ಧಿ / ವೃತ್ತಿ ತರಬೇತಿ ಕಾರ್ಯಕ್ರಮಗಳಾದ ನರ್ಸಿಂಗ್ ಕೋರ್ಸ್ (ಬಿ.ಎಸ್ಸಿ ಮತ್ತು ಜಿ.ಎನ್.ಎಂ. ನರ್ಸಿಂಗ್), ಪ್ಯಾರಾ ಮೆಡಿಕಲ್, ನಿಫ್ಟ್, ಸಿಪೆಟ್ ಮತ್ತು ಇತರೆ ಕಂಪ್ಯೂಟರ್ ತರಬೇತಿ ಕಾರ್ಯಕ್ರಮಗಳಿಗೆ ಉಪಯೋಗಿಸಲಾಗುವುದು.<br><br>○ ಸದರಿ ಕಾರ್ಯಕ್ರಮಗಳೊಂದಿಗೆ ಪರಿಶಿಷ್ಟ ಜಾತಿ ಜನರ ಸರ್ವತೋಮುಖ ಅಭಿವೃದ್ಧಿಗಾಗಿ ಡಾ॥ ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ಮೂಲಕ ಇನ್ನಿತರೆ ಕಾರ್ಯಕ್ರಮಗಳನ್ನೂ ಸಹ ಹಮ್ಮಿಕೊಂಡು ಅನುಷ್ಠಾನಗೊಳಿಸಲಾಗುತ್ತಿದೆ. ತರಬೇತಿ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಅನುದಾನವನ್ನು ಜಿಲ್ಲೆಗಳಿಗೆ ಮರುಹಂಚಿಕೆ / ಬಿಡುಗಡೆ ಮಾಡಿ, ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಮೂಲಕ ಅನುಷ್ಠಾನ ಗೊಳಿಸಲಾಗುತ್ತದೆ. | | | | | |

## ಉದ್ಯೋಗ ಮತ್ತು ತರಬೇತಿ :

| ಕ್ರ. ಸಂ. | ಯೋಜನೆ / ಕಾರ್ಯಕ್ರಮದ ಹೆಸರು | ಯೋಜನೆ / ಕಾರ್ಯಕ್ರಮದ ಸಂಕ್ಷಿಪ್ತ ವಿವರ | ಮಂಜೂರು / ಅನುಷ್ಠಾನ / ಉಸ್ತುವಾರಿ ಮಾಡುವ ಪ್ರಾಧಿಕಾರ | ಅರ್ಹತಾ ಮಾನದಂಡ | ಅವಶ್ಯವಿರುವ ದಾಖಲಾತಿಗಳು | ಅರ್ಹತಾ ಅವಧಿ | ಷರಾ |
|---|---|---|---|---|---|---|---|
| 1. | ನೇಮಕಾತಿ ಮತ್ತು ಮುಂಬಡ್ತಿಯಲ್ಲಿ ಮೀಸಲಾತಿ | • ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗದವರಿಗೆ ನೇಮಕಾತಿ ಮತ್ತು ಪದೋನ್ನತಿಯಲ್ಲಿ ಮೀಸಲಾತಿ ಅನುಷ್ಠಾನದ ಮೇಲುಸ್ತುವಾರಿ.<br><br>• ಗ್ರೂಪ್-ಸಿ ವೃಂದದ ನೇಮಕಾತಿಯಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗದ ಅಭ್ಯರ್ಥಿಗಳ ಪ್ರಾತಿನಿಧ್ಯತೆಯ ಬಗ್ಗೆ ವಾರ್ಷಿಕ ವರದಿಯನ್ನು ನಮೂನೆ-4 ರಲ್ಲಿ ಸರ್ಕಾರದ ಇಲಾಖೆಗಳು/ ಮಂಡಳಿಗಳು / ನಿಗಮಗಳು / ಸಹಕಾರಿ ಸಂಸ್ಥೆಗಳು / ವಿಶ್ವವಿದ್ಯಾಲಯಗಳು / ಶಿಕ್ಷಣ ಸಂಸ್ಥೆಗಳು ಇತ್ಯಾದಿ ನೇಮಕಾತಿ ಪ್ರಾಧಿಕಾರಗಳಿಂದ ಮಾಹಿತಿ ಸಂಗ್ರಹಣೆ ಮತ್ತು ಕ್ರೂಢೀಕರಣ.<br><br>• ಮೀಸಲಾತಿ ಜಾರಿ ಮತ್ತು ಬ್ಯಾಕ್‌ಲಾಗ್ ಹುದ್ದೆಗಳನ್ನು ಗುರುತಿಸಲು ಇಲಾಖೆ/ಸಂಸ್ಥೆಗಳ ತಪಾಸಣೆ.<br><br>• ಸರ್ಕಾರದ ಇಲಾಖೆಗಳು/ ಮಂಡಳಿಗಳು / ನಿಗಮಗಳು / ಸಹಕಾರಿ ಸಂಸ್ಥೆಗಳು/ವಿಶ್ವ ವಿದ್ಯಾಲಯಗಳು / ಶಿಕ್ಷಣ ಸಂಸ್ಥೆಗಳು ಇತ್ಯಾದಿಗಳಲ್ಲಿ ನೇರ ನೇಮಕಾತಿ ಮತ್ತು ಮುಂಬಡ್ತಿಯಲ್ಲಿ ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿ ಬಗ್ಗೆ ಮೇಲ್ವಿಚಾರಣೆ.<br><br>• ವಿವಿಧ ಇಲಾಖೆ / ಸಂಸ್ಥೆಗಳಲ್ಲಿ ನಡೆಯುವ ನೇರ ನೇಮಕಾತಿಗೆ ಸಂಬಂಧಿಸಿದ ಸಂದರ್ಶನಕ್ಕೆ ಮತ್ತು ಆಯ್ಕೆ ಸಮಿತಿಗೆ ಇಲಾಖಾ ಅಧಿಕಾರಿಗಳನ್ನು ನಿಯೋಜಿಸುವುದು. | ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ರವರು ಉಸ್ತುವಾರಿ ಪ್ರಾಧಿಕಾರ | ಸರ್ಕಾರದ ಇಲಾಖೆಗಳು / ಮಂಡಳಿಗಳು / ನಿಗಮಗಳು / ಸಹಕಾರಿ ಸಂಸ್ಥೆಗಳು / ವಿಶ್ವವಿದ್ಯಾಲಯಗಳು / ಶಿಕ್ಷಣ ಸಂಸ್ಥೆಗಳು ಇತ್ಯಾದಿಗಳಲ್ಲಿ ಮೀಸಲಾತಿಯಿಂದ ವಂಚಿತರಾದ ಪ.ಜಾತಿ/ ಪ.ವರ್ಗದ ನೌಕರರು.<br><br>ಮೀಸಲಾತಿ ಕುರಿತು ಸ್ಪಷ್ಟೀಕರಣ ಕೋರುವ ಇಲಾಖೆಗಳು/ ಸಂಸ್ಥೆಗಳು. | ಮನವಿ ಪತ್ರದೊಂದಿಗೆ ಸೂಕ್ತ ದಾಖಲಾತಿಗಳು<br><br>ನಮೂನೆ-4 | ಕಾಲಮಿತಿ ಇರುವುದಿಲ್ಲ.<br><br>ವಾರ್ಷಿಕ ವರದಿಯನ್ನು ಪ್ರತಿವರ್ಷ ಮೇ 1ನೇ ದಿನಾಂಕದೊಳಗೆ | ಜಂಟಿ ನಿರ್ದೇಶಕರು (ಆಡಳಿತ), ಉಪ ನಿರ್ದೇಶಕರು (ಉ ಮತ್ತು ತ) ರವರನ್ನು ಸಂಪರ್ಕಿಸಬಹುದು |

| ಕ್ರ. ಸಂ. | ಯೋಜನೆ / ಕಾರ್ಯಕ್ರಮದ ಹೆಸರು | ಯೋಜನೆ / ಕಾರ್ಯಕ್ರಮದ ಸಂಕ್ಷಿಪ್ತ ವಿವರ | ಮಂಜೂರು / ಅನುಷ್ಠಾನ / ಉಸ್ತುವಾರಿ ಮಾಡುವ ಪ್ರಾಧಿಕಾರ | ಅರ್ಹತಾ ಮಾನದಂಡ | ಅವಶ್ಯವಿರುವ ದಾಖಲಾತಿಗಳು | ಅರ್ಹತಾ ಅವಧಿ | ಷರಾ |
|---|---|---|---|---|---|---|---|
| | | • ವಿವಿಧ ಇಲಾಖೆ / ಸಂಸ್ಥೆಗಳಲ್ಲಿ ನಡೆಯುವ ಇಲಾಖಾ ಮುಂಬಡ್ತಿಯಲ್ಲಿ ಸಮಿತಿಗೆ ಪ.ಜಾತಿ / ಪ.ವರ್ಗದವರ ಪ್ರಾತಿನಿಧ್ಯತೆ ಕುರಿತು ಪರಿಶೀಲಿಸಲು ಇಲಾಖಾ ಮುಂಬಡ್ತಿ ಸಮಿತಿ ಸಭೆಗೆ ಅಧಿಕಾರಿಗಳನ್ನು ನಿಯೋಜಿಸುವುದು.<br><br>• ನೇರ ನೇಮಕಾತಿ ಮತ್ತು ಪದೋನ್ನತಿಯಲ್ಲಿ ಮೀಸಲಾತಿ ಕುರಿತು ಸ್ಪಷ್ಟೀಕರಣ / ಮಾರ್ಗದರ್ಶನ ನೀಡುವುದು.<br><br>• ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಹಾಗೂ ಅನುಸೂಚಿತ ಬುಡಕಟ್ಟುಗಳ ಆಯೋಗದಲ್ಲಿ ದಾಖಲಾದ ಮೀಸಲಾತಿಗೆ ಸಂಬಂಧಿಸಿದಂತೆ ಕೋರುವ ಪ್ರಕರಣಗಳಿಗೆ ತನಿಖಾ ವರದಿ ಒದಗಿಸುವುದು.<br><br>• ರಾಜ್ಯದ ಉನ್ನತ ಮಟ್ಟದ ಸಮಿತಿ, ಸಚಿವ ಸಂಪುಟದ ಉಪಸಮಿತಿ ಮತ್ತು ವಿಧಾನ ಮಂಡಲದ ಪ.ಜಾತಿ/ಪ.ವರ್ಗಗಳ ಕಲ್ಯಾಣ ಸಮಿತಿಗೆ ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿ ಬಗ್ಗೆ ಮಾಹಿತಿ ಒದಗಿಸುವುದು.<br><br>• ಮೀಸಲಾತಿ ಮತ್ತು ಸುಳ್ಳು ಜಾತಿ ಪ್ರಮಾಣ ಪತ್ರ ಕುರಿತು ನ್ಯಾಯಾಲಯಗಳಲ್ಲಿ ದಾಖಲಾದ ಪ್ರಕರಣಗಳಿಗೆ ಸರ್ಕಾರಿ ವಕೀಲರ ಮೂಲಕ ಕ್ರಮ ಕೈಗೊಳ್ಳುವುದು.<br><br>• ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) ಅಧಿನಿಯಮ 1990 ಮತ್ತು ನಿಯಮ 1992 ಹಾಗೂ ತಿದ್ದುಪಡಿಗಳು ಇದರ ವ್ಯಾಪ್ತಿಯ ಕಾರ್ಯಗಳ ಮೇಲುಸ್ತುವಾರಿ. | | | | | |

| ಕ್ರ. ಸಂ. | ಯೋಜನೆ / ಕಾರ್ಯಕ್ರಮದ ಹೆಸರು | ಯೋಜನೆ / ಕಾರ್ಯಕ್ರಮದ ಸಂಕ್ಷಿಪ್ತ ವಿವರ | ಮಂಜೂರು / ಅನುಷ್ಠಾನ / ಉಸ್ತುವಾರಿ ಮಾಡುವ ಪ್ರಾಧಿಕಾರ | ಅರ್ಹತಾ ಮಾನದಂಡ | ಅವಶ್ಯವಿರುವ ದಾಖಲಾತಿಗಳು | ಅರ್ಹತಾ ಅವಧಿ | ಷರಾ |
|---|---|---|---|---|---|---|---|
| 2. | ಶಿಕ್ಷಣ ಸಂಸ್ಥೆಗಳಲ್ಲಿ ದಾಖಲಾತಿಯಲ್ಲಿ ಮೀಸಲಾತಿ | • ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗದವರಿಗೆ ಶಿಕ್ಷಣ ಸಂಸ್ಥೆಗಳಲ್ಲಿ ದಾಖಲಾತಿಯಲ್ಲಿ ಮೀಸಲಾತಿ ಜಾರಿ ಕುರಿತು ಮೇಲುಸ್ತುವಾರಿ.<br>• ವಿಶ್ವವಿದ್ಯಾಲಯಗಳು / ಶಿಕ್ಷಣ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗದ ಅಭ್ಯರ್ಥಿಗಳಿಗೆ ದಾಖಲಾತಿಯಲ್ಲಿ ಮೀಸಲಾತಿ ಕುರಿತು ನಮೂನೆ-6 ರಲ್ಲಿ ವಾರ್ಷಿಕ ವರದಿಗೆ ಮಾಹಿತಿ ಸಂಗ್ರಹಣೆ ಮತ್ತು ಕ್ರೂಢೀಕರಿಸುವುದು. | ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ರವರು ಉಸ್ತುವಾರಿ ಪ್ರಾಧಿಕಾರ | ಮೀಸಲಾತಿ ವಂಚಿತ ಪ.ಜಾತಿ/ಪ.ವರ್ಗದ ವಿದ್ಯಾರ್ಥಿಗಳು/ ಅಭ್ಯರ್ಥಿಗಳು / ಸಂಘ ಸಂಸ್ಥೆಗಳು<br>ಶಿಕ್ಷಣ ಸಂಸ್ಥೆಗಳು / ವಿಶ್ವವಿದ್ಯಾಲಯಗಳು ಇತ್ಯಾದಿ. | ಮನವಿ ಪತ್ರದೊಂದಿಗೆ ಸೂಕ್ತ ದಾಖಲಾತಿಗಳು.<br>ನಮೂನೆ -6 | ಕಾಲಮಿತಿ ಇರುವುದಿಲ್ಲ.<br>ಪ್ರತಿ ವರ್ಷ ಸೆಪ್ಟೆಂಬರ್ 1ನೇ ತಾರೀಖಿನೊಳಗಾಗಿ | |
| 3. | ಜಾತಿ ಪ್ರಮಾಣ ಪತ್ರ | ಜಾತಿ ಪ್ರಮಾಣ ಪತ್ರ ನೀಡುವ ಕುರಿತು ಸ್ಪಷ್ಟೀಕರಣ ನೀಡುವುದು. | ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ರವರು ಉಸ್ತುವಾರಿ ಪ್ರಾಧಿಕಾರ | ಯಾವುದೇ ವ್ಯಕ್ತಿ/ ಸಂಘ ಸಂಸ್ಥೆಗಳು/ ಕಛೇರಿಗಳು. | ಮನವಿ ಪತ್ರದೊಂದಿಗೆ ಸೂಕ್ತ ದಾಖಲಾತಿಗಳು. | ಕಾಲಮಿತಿ ಇರುವುದಿಲ್ಲ. | ಜಂಟಿ ನಿರ್ದೇಶಕರು (ಆಡಳಿತ), ಉಪ ನಿರ್ದೇಶಕರು (ಉ ಮತ್ತು ತ) ರವರನ್ನು ಸಂಪರ್ಕಿಸಬಹುದು |
| 4. | ಸಿಂಧುತ್ವ ಪ್ರಮಾಣ ಪತ್ರ | ಸಿಂಧುತ್ವ ಪ್ರಮಾಣ ಪತ್ರ ನೀಡುವ ಕುರಿತು ಸ್ಪಷ್ಟೀಕರಣ ನೀಡುವುದು. | ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ರವರು ಉಸ್ತುವಾರಿ ಪ್ರಾಧಿಕಾರ | ನೇಮಕಾತಿ ಪ್ರಾಧಿಕಾರವು ಸಿಂಧುತ್ವ ಪ್ರಮಾಣ ಪತ್ರಕ್ಕಾಗಿ ಪ.ಜಾತಿ/ ಪ.ವರ್ಗದ ಅಭ್ಯರ್ಥಿಯ ಜಾತಿ ಪ್ರಮಾಣ ಪತ್ರ ಮತ್ತು ಆಯ್ಕೆ ಪಟ್ಟಿಯೊಂದಿಗೆ ಅಧಿಕೃತವಾಗಿ ಜಿಲ್ಲಾಧಿಕಾರಿಗಳು / ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳಿಗೆ ಮನವಿ ಸಲ್ಲಿಸುವುದು. ಯಾವುದೇ ವ್ಯಕ್ತಿ / ಸಂಘ ಸಂಸ್ಥೆಗಳು / ಕಛೇರಿಗಳು. | ಮನವಿ ಪತ್ರದೊಂದಿಗೆ ಸೂಕ್ತ ದಾಖಲಾತಿಗಳು. | ಕಾಲಮಿತಿ ಇರುವುದಿಲ್ಲ. | ಜಂಟಿ ನಿರ್ದೇಶಕರು (ಆಡಳಿತ), ಉಪ ನಿರ್ದೇಶಕರು (ಉ ಮತ್ತು ತ) ರವರನ್ನು ಸಂಪರ್ಕಿಸಬಹುದು |

| ಕ್ರ. ಸಂ. | ಯೋಜನೆ / ಕಾರ್ಯಕ್ರಮದ ಹೆಸರು | ಯೋಜನೆ / ಕಾರ್ಯಕ್ರಮದ ಸಂಕ್ಷಿಪ್ತ ವಿವರ | ಮಂಜೂರು / ಅನುಷ್ಠಾನ / ಉಸ್ತುವಾರಿ ಮಾಡುವ ಪ್ರಾಧಿಕಾರ | ಅರ್ಹತಾ ಮಾನದಂಡ | ಅವಶ್ಯವಿರುವ ದಾಖಲಾತಿಗಳು | ಅರ್ಹತಾ ಅವಧಿ | ಷರಾ |
|---|---|---|---|---|---|---|---|
| 5. | ಮೇಲ್ಮನವಿ ಪ್ರಕರಣಗಳು | ಜಿಲ್ಲಾ ಜಾತಿ ಪರಿಶೀಲನಾ ಸಮಿತಿಯಿಂದ ಹೊರಡಿಸಿಲಾದ ಆದೇಶಗಳ ವಿರುದ್ಧ ದಾಖಲಾದ ಮೇಲ್ಮನವಿ ಪ್ರಕರಣಗಳ ವಿಚಾರಣೆ ಮತ್ತು ಇತ್ಯರ್ಥ. | ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ರವರು ಉಸ್ತುವಾರಿ ಪ್ರಾಧಿಕಾರ | ಜಿಲ್ಲಾ ಜಾತಿ ಪರಿಶೀಲನಾ ಸಮಿತಿಯ ಆದೇಶದಿಂದ ಬಾದಿತರಾದ ವ್ಯಕ್ತಿಗಳು. ಆದೇಶ ಪಡೆದ ೩೦ ದಿವಸದೊಳಗಾಗಿ ಮೇಲ್ಮನವಿ ಸಲ್ಲಿಸುವುದು. | ಮೇಲ್ಮನವಿಯೊಂದಿಗೆ ಜಿಲ್ಲಾ ಜಾತಿ ಪರಿಶೀಲನಾ ಸಮಿತಿಯ ಆದೇಶ ಮತ್ತು ಸಂಬಂಧಪಟ್ಟ ದಾಖಲೆಗಳು. | ೩೦ ದಿನಗಳು | ಜಂಟಿ ನಿರ್ದೇಶಕರು (ಆಡಳಿತ), ಉಪ ನಿರ್ದೇಶಕರು (ಉ ಮತ್ತು ತ) ರವರನ್ನು ಸಂಪರ್ಕಿಸಬಹುದು |

## ರಾಜ್ಯ ವಲಯ - ಶೈಕ್ಷಣಿಕ ಆಧಾರಿತ ಯೋಜನೆಗಳು

## ಮೂಲಭೂತ ಸೌಕರ್ಯ

| ಕ್ರ. ಸಂ. | ಯೋಜನೆ / ಕಾರ್ಯಕ್ರಮದ ಹೆಸರು | ಯೋಜನೆ / ಕಾರ್ಯಕ್ರಮದ ಸಂಕ್ಷಿಪ್ತ ವಿವರ | ಮಂಜೂರು / ಅನುಷ್ಠಾನ / ಉಸ್ತುವಾರಿ ಮಾಡುವ ಪ್ರಾಧಿಕಾರ | ಅರ್ಹತಾ ಮಾನದಂಡ | ಅವಶ್ಯವಿರುವ ದಾಖಲಾತಿಗಳು | ಅರ್ಹತಾ ಅವಧಿ | ಷರಾ |
|---|---|---|---|---|---|---|---|
| 1 | ರಾಜ್ಯ ಆಯವ್ಯಯದಡಿ ವಿದ್ಯಾರ್ಥಿನಿಲಯಗಳ ನಿರ್ಮಾಣ | ಬಾಡಿಗೆ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿದ್ಯಾರ್ಥಿನಿಲಯಗಳಿಗೆ ಸರ್ಕಾರಿ ನಿವೇಶನಗಳಲ್ಲಿ ಅಥವಾ ಖರೀದಿಸಿದ ನಿವೇಶನಗಳಲ್ಲಿ ವಿದ್ಯಾರ್ಥಿನಿಲಯಗಳ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುವುದು..<br><br>ಕರ್ನಾಟಕ ಪಾರದರ್ಶಕ ನಿಯಮದನ್ವಯ ನಿರ್ಮಾಣ ಕಾರ್ಯವನ್ನು ಸರ್ಕಾರಿ ನಿರ್ಮಾಣ ಸಂಸ್ಥೆಗಳಿಗೆ ವಹಿಸಲಾಗುವುದು | ಸರ್ಕಾರವು ಮಂಜೂರಾತಿ ನೀಡುವ ಪ್ರಾಧಿಕಾರ<br><br>ಅನುಷ್ಠಾನಾಧಿಕಾರಿಗಳು ಸಂಬಂಧಿಸಿದ ನಿರ್ಮಾಣ ಸಂಸ್ಥೆಗಳು<br><br>ಉಸ್ತುವಾರಿ ಮಾಡುವ ಅಧಿಕಾರಿ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ | ಕರ್ನಾಟಕ ಪಾರದರ್ಶಕ ಕಾಯ್ದೆಯಲ್ಲಿರುವ ಪ್ರಸ್ತುತ ನಿಯಮಗಳನ್ವಯ | ಟೆಂಡರ್ ದಾಖಲಾತಿಯಲ್ಲಿ ನಿಗದಿಪಡಿಸಿರುವಂತೆ | ಕಛೇರಿ ಆದೇಶ ಮತ್ತು ಒಪ್ಪಂದದ ಪ್ರಕಾರ ಆಡಳಿತಾತ್ಮಕ ಅನುಮೋದನೆ ದಿನಾಂಕದಿಂದ 12 ರಿಂದ 24 ತಿಂಗಳೊಳಗಾಗಿ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸತಕ್ಕದ್ದು | ಹೆಚ್ಚಿನ ಮಾಹಿತಿಗಾಗಿ ಆಯುಕ್ತರು / ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ರವರನ್ನು ಸಂಪರ್ಕಿಸಬಹುದು |
| 2 | ಕೇಂದ್ರ ಸರ್ಕಾರದ ಅನುದಾನದಡಿ ವಿದ್ಯಾರ್ಥಿನಿಲಯಗಳ ನಿರ್ಮಾಣ | ಕೇಂದ್ರ ಸರ್ಕಾರವು ಬಾಲಕಿಯರ ವಿದ್ಯಾರ್ಥಿನಿಲಯಗಳ ನಿರ್ಮಾಣಕ್ಕಾಗಿ ಶೇ.100 ರಷ್ಟು ಮತ್ತು ಬಾಲಕರ ವಿದ್ಯಾರ್ಥಿನಿಲಯಗಳಿಗೆ ಶೇ.50 ರಷ್ಟು ಅನುದಾನವನ್ನು ಬಾಬು ಜಗಜೀವನರಾಂ ಛಾತ್ರವಾಸ್ ಯೋಜನೆಯಡಿ ಒದಗಿಸುತ್ತಿದೆ | ಸರ್ಕಾರವು ಮಂಜೂರಾತಿ ನೀಡುವ ಪ್ರಾಧಿಕಾರ<br><br>ಅನುಷ್ಠಾನಾಧಿಕಾರಿಗಳು ಸಂಬಂಧಿಸಿದ ನಿರ್ಮಾಣ ಸಂಸ್ಥೆಗಳು<br><br>ಉಸ್ತುವಾರಿ ಮಾಡುವ ಅಧಿಕಾರಿ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ | ಕರ್ನಾಟಕ ಪಾರದರ್ಶಕ ಕಾಯ್ದೆಯಲ್ಲಿರುವ ಪ್ರಸ್ತುತ ನಿಯಮಗಳನ್ವಯ | ಟೆಂಡರ್ ದಾಖಲಾತಿಯಲ್ಲಿ ನಿಗದಿಪಡಿಸಿರುವಂತೆ | ಕಛೇರಿ ಆದೇಶ ಮತ್ತು ಒಪ್ಪಂದದ ಪ್ರಕಾರ ಆಡಳಿತಾತ್ಮಕ ಅನುಮೋದನೆ ದಿನಾಂಕದಿಂದ 12 ರಿಂದ 18 ತಿಂಗಳೊಳಗಾಗಿ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸತಕ್ಕದ್ದು | ಹೆಚ್ಚಿನ ಮಾಹಿತಿಗಾಗಿ ಆಯುಕ್ತರು / ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ರವರನ್ನು ಸಂಪರ್ಕಿಸಬಹುದು |

| ಕ್ರ. ಸಂ. | ಯೋಜನೆ / ಕಾರ್ಯಕ್ರಮದ ಹೆಸರು | ಯೋಜನೆ / ಕಾರ್ಯಕ್ರಮದ ಸಂಕ್ಷಿಪ್ತ ವಿವರ | ಮಂಜೂರು / ಅನುಷ್ಠಾನ / ಉಸ್ತುವಾರಿ ಮಾಡುವ ಪ್ರಾಧಿಕಾರ | ಅರ್ಹತಾ ಮಾನದಂಡ | ಅವಶ್ಯವಿರುವ ದಾಖಲಾತಿಗಳು | ಅರ್ಹತಾ ಅವಧಿ | ಷರಾ |
|---|---|---|---|---|---|---|---|
| 3 | ಪರಿಶಿಷ್ಟ ಜಾತಿ ಕಾಲೋನಿಗಳಲ್ಲಿ ಅಭಿವೃದ್ಧಿ | ಪರಿಶಿಷ್ಟ ಜಾತಿ ಕುಟುಂಬಗಳು ವಾಸಿಸುತ್ತಿರುವ ಕಾಲೋನಿಗಳಲ್ಲಿ ಆರೋಗ್ಯಕರ ಪರಿಸರ ಸೃಷ್ಟಿಸಲು ಮತ್ತು ಜೀವನ ಪರಿಸ್ಥಿತಿಯನ್ನು ಅಭಿವೃದ್ಧಿಪಡಿಸಲು ಸಿಮೆಂಟ್ ರಸ್ತೆ, ಚರಂಡಿ, ಕುಡಿಯುವ ನೀರಿನ ಸೌಕರ್ಯ, ಬೀದಿ ದೀಪ ವೈಯಕ್ತಿಕ ಮತ್ತು ಸಮುದಾಯ ಶೌಚಾಲಯಗಳನ್ನು ನಿರ್ಮಿಸಲಾಗುವುದು | ಜಿಲ್ಲಾಧಿಕಾರಿಗಳು ಮಂಜೂರಾತಿ ನೀಡುವ ಪ್ರಾಧಿಕಾರ<br><br>ಅನುಷ್ಠಾನಾಧಿಕಾರಿಗಳು ಸಂಬಂಧಿಸಿದ ಸಂಸ್ಥೆಗಳು<br><br>ಉಸ್ತುವಾರಿ ಮಾಡುವವರು ಸಂಬಂಧಿಸಿದ ಜಿಲ್ಲಾ / ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳು | ಕರ್ನಾಟಕ ಪಾರದರ್ಶಕ ಕಾಯ್ದೆಯಲ್ಲಿರುವ ಪ್ರಸ್ತುತ ನಿಯಮಗಳನ್ವಯ | ಟೆಂಡರ್ ದಾಖಲಾತಿಯಲ್ಲಿ ನಿಗದಿಪಡಿಸಿರುವಂತೆ | ಕಾರ್ಯಾದೇಶದಲ್ಲಿ ನಿಗದಿಪಡಿಸಿರುವಂತೆ | ಕೆಲಸದ ಗುಣಮಟ್ಟಕ್ಕೆ ಸಂಬಂಧಿಸಿದಂತೆ ಯಾವುದೇ ದೂರುಗಳನ್ನು ಸಲ್ಲಿಸಲು / ಹೆಚ್ಚಿನ ಮಾಹಿತಿಗಾಗಿ ಜಿಲ್ಲಾಧಿಕಾರಿಗಳನ್ನು ಸಂಪರ್ಕಿಸಬಹುದು<br><br>ಜಿಲ್ಲಾ ಮಟ್ಟದಲ್ಲಿ ಪರಿಹಾರ ದೊರಕದೆ ಇದ್ದಲ್ಲಿ ಆಯುಕ್ತರು / ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ರವರನ್ನು ಸಂಪರ್ಕಿಸಬಹುದು |
| 4 | ಡಾ॥ ಬಿ.ಆರ್. ಅಂಬೇಡ್ಕರ್ ಭವನ / ಬಾಬು ಜಗಜೀವನರಾಂ ಭವನ / ಸಮುದಾಯ ಭವನಗಳ ನಿರ್ಮಾಣ | ಪರಿಶಿಷ್ಟ ಜಾತಿ ಜನರು ಹೆಚ್ಚಾಗಿ ವಾಸಿಸುತ್ತಿರುವ ಕಾಲೋನಿಗಳಲ್ಲಿ ಮದುವೆ / ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ / ಸಭೆಗಳಿಗೆ / ತರಬೇತಿ ಕಾರ್ಯಕ್ರಮ ಮುಂತಾದವುಗಳಿಗೆ ಡಾ॥ ಬಿ.ಆರ್. ಅಂಬೇಡ್ಕರ್ / ಬಾಬು ಜಗಜೀವನರಾಂ ಮತ್ತು ಸಮುದಾಯ ಭವನಗಳ ನಿರ್ಮಾಣ.<br><br>ಸರ್ಕಾರಿ ಆದೇಶ ದಿನಾಂಕ 28.09.2011 ರನ್ವಯ ಡಾ॥ ಬಿ.ಆರ್. ಅಂಬೇಡ್ಕರ್ / ಬಾಬು ಜಗಜೀವನರಾಂ ಮತ್ತು ಸಮುದಾಯ ಭವನಗಳ ನಿರ್ಮಾಣ ಕಾರ್ಯವನ್ನು | ಸರ್ಕಾರವು ಮಂಜೂರಾತಿ ನೀಡುವ ಪ್ರಾಧಿಕಾರ<br><br>ಜಿಲ್ಲಾಧಿಕಾರಿಗಳು ಅನುಷ್ಠಾನ ಮಾಡುವ ಅಧಿಕಾರಿಗಳು<br><br>ಉಸ್ತುವಾರಿ ಮಾಡುವ ಅಧಿಕಾರಿ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ | ಕರ್ನಾಟಕ ಪಾರದರ್ಶಕ ಕಾಯ್ದೆಯಲ್ಲಿರುವ ಪ್ರಸ್ತುತ ನಿಯಮಗಳನ್ವಯ | ಟೆಂಡರ್ ದಾಖಲಾತಿಯಲ್ಲಿ ನಿಗದಿಪಡಿಸಿರುವಂತೆ | ಕಾರ್ಯಾದೇಶದಲ್ಲಿ ನಿಗದಿಪಡಿಸಿರುವಂತೆ | ಕೆಲಸದ ಗುಣಮಟ್ಟಕ್ಕೆ ಸಂಬಂಧಿಸಿದಂತೆ ಯಾವುದೇ ದೂರುಗಳನ್ನು ಸಲ್ಲಿಸಲು / ಹೆಚ್ಚಿನ ಮಾಹಿತಿಗಾಗಿ ಜಿಲ್ಲಾಧಿಕಾರಿಗಳನ್ನು ಸಂಪರ್ಕಿಸಬಹುದು<br><br>ಜಿಲ್ಲಾ ಮಟ್ಟದಲ್ಲಿ ಪರಿಹಾರ ದೊರಕದೆ ಇದ್ದಲ್ಲಿ ಆಯುಕ್ತರು / ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ರವರನ್ನು ಸಂಪರ್ಕಿಸಬಹುದು |

| ಕ್ರ. ಸಂ. | ಯೋಜನೆ / ಕಾರ್ಯಕ್ರಮದ ಹೆಸರು | ಯೋಜನೆ / ಕಾರ್ಯಕ್ರಮದ ಸಂಕ್ಷಿಪ್ತ ವಿವರ | ಮಂಜೂರು / ಅನುಷ್ಠಾನ / ಉಸ್ತುವಾರಿ ಮಾಡುವ ಪ್ರಾಧಿಕಾರ | ಅರ್ಹತಾ ಮಾನದಂಡ | ಅವಶ್ಯವಿರುವ ದಾಖಲಾತಿಗಳು | ಅರ್ಹತಾ ಅವಧಿ | ಷರಾ |
|---|---|---|---|---|---|---|---|
| | | ಕೈಗೆತ್ತಿಕೊಳ್ಳಲು ಗ್ರಾಮ ಮಟ್ಟದಲ್ಲಿ ರೂ.10.00 ಲಕ್ಷ / ಹೋಬಳಿ ಮಟ್ಟದಲ್ಲಿ ರೂ.50.00 ಲಕ್ಷ / ತಾಲ್ಲೂಕು ಮಟ್ಟದಲ್ಲಿ ರೂ.100.00 ಲಕ್ಷ / ಜಿಲ್ಲಾ ಮಟ್ಟದಲ್ಲಿ ರೂ.300.00 ಲಕ್ಷ / ರಾಜ್ಯ ಮಟ್ಟದಲ್ಲಿ ರೂ.500.00 ಲಕ್ಷಗಳನ್ನು ಒದಗಿಸಲಾಗುವುದು.<br><br>ಹೆಚ್ಚಿನ ಅನುದಾನ ಅವಶ್ಯಕತೆ ಇದ್ದಲ್ಲಿ ಸ್ಥಳೀಯ ಸಂಸ್ಥೆಗಳು / ಮಾನ್ಯ ಲೋಕಸಭಾ ಸದಸ್ಯರು / ಮಾನ್ಯ ವಿಧಾನಸಭಾ ಸದಸ್ಯರಿಂದ ಸಂಗ್ರಹಿಸಲಾಗುವುದು | | | | | |
| 5 | ವಿದ್ಯಾರ್ಥಿನಿಲಯಗಳ ದುರಸ್ಥಿ | ಸ್ವಂತ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸರ್ಕಾರಿ ವಿದ್ಯಾರ್ಥಿನಿಲಯಗಳಿಗೆ ಎಲ್ಲಾ ತರಹದ ದುರಸ್ಥಿ ಕಾರ್ಯಗಳಿಗಾಗಿ (ವಿಟ್ರಿಫೈಡ್ ಟೈಲ್ಸ್ ಅನ್ನು ಶೌಚಾಲಯ, ಅಡುಗೆ ಮನೆ, ಭೋಜನ ಶಾಲೆ, ವರೆಂಡಾ ಮುಂತಾದ ಸ್ಥಳಗಳಲ್ಲಿ ಹಾಕುವುದಕ್ಕಾಗಿ) ಮತ್ತು ಹಾಳಿ ವಿದ್ಯಾರ್ಥಿನಿಲಯಗಳನ್ನು ನಿರ್ವಹಣಾ ರಹಿತ ವಿದ್ಯಾರ್ಥಿನಿಲಯಗಳನ್ನಾಗಿ ಮಾಡಲು ಉನ್ನತೀಕರಣಗೊಳಿಸಲು ಅನುದಾನವನ್ನು ಮಂಜೂರು ಮಾಡಲಾಗುವುದು. | ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ರವರು ಮಂಜೂರಾತಿ ನೀಡುವ ಪ್ರಾಧಿಕಾರ<br><br>ಜಿಲ್ಲಾಧಿಕಾರಿಗಳು / ಜಿ.ಸ.ಕ.ಅ / ತಾ.ಸ.ಕ.ಅ ಅನುಷ್ಠಾನ ಮಾಡುವ ಅಧಿಕಾರಿಗಳು<br><br>ಉಸ್ತುವಾರಿ ಮಾಡುವ ಅಧಿಕಾರಿ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ | ಕರ್ನಾಟಕ ಪಾರದರ್ಶಕ ಕಾಯ್ದೆಯಲ್ಲಿರುವ ಪ್ರಸ್ತುತ ನಿಯಮಗಳನ್ವಯ | ಟೆಂಡರ್ ದಾಖಲಾತಿಯಲ್ಲಿ ನಿಗದಿಪಡಿಸಿರುವಂತೆ | ಕಾರ್ಯಾದೇಶದಲ್ಲಿ ನಿಗದಿಪಡಿಸಿರುವಂತೆ | ದುರಸ್ಥಿ ಕೆಲಸದ ಗುಣಮಟ್ಟಕ್ಕೆ ಸಂಬಂಧಿಸಿದಂತೆ ಯಾವುದೇ ದೂರುಗಳನ್ನು ಸಲ್ಲಿಸಲು / ಹೆಚ್ಚಿನ ಮಾಹಿತಿಗಾಗಿ ಜಿಲ್ಲಾಧಿಕಾರಿಗಳು / ಜಿ.ಸ.ಕ.ಅ / ತಾ.ಸ.ಕ.ಅ ರವರನ್ನು ಸಂಪರ್ಕಿಸಬಹುದು<br><br>ಜಿಲ್ಲಾ ಮಟ್ಟದಲ್ಲಿ ಪರಿಹಾರ ದೊರಕದೆ ಇದ್ದಲ್ಲಿ ಆಯುಕ್ತರು / ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ರವರನ್ನು ಸಂಪರ್ಕಿಸಬಹುದು |

| ಕ್ರ. ಸಂ. | ಯೋಜನೆ / ಕಾರ್ಯಕ್ರಮದ ಹೆಸರು | ಯೋಜನೆ / ಕಾರ್ಯಕ್ರಮದ ಸಂಕ್ಷಿಪ್ತ ವಿವರ | ಮಂಜೂರು / ಅನುಷ್ಠಾನ / ಉಸ್ತುವಾರಿ ಮಾಡುವ ಪ್ರಾಧಿಕಾರ | ಅರ್ಹತಾ ಮಾನದಂಡ | ಅವಶ್ಯವಿರುವ ದಾಖಲಾತಿಗಳು | ಅರ್ಹತಾ ಅವಧಿ | ಷರಾ |
|---|---|---|---|---|---|---|---|
| 6 | ವಿದ್ಯಾರ್ಥಿನಿಲಯದ ನಿಲಯಾರ್ಥಿಗಳಿಗೆ ಇತರೆ ಸೌಲಭ್ಯಗಳನ್ನು ಒದಗಿಸುವುದು | ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಹಾಸಿಗೆ-ಹೊದಿಕೆ, ಮಂಚ, ಟ್ರಂಕ್, ಕ್ರೀಡಾ ಸಾಮಗ್ರಿಗಳು, ನೀರಿನ ಶುದ್ಧೀಕರಣ ಯಂತ್ರ, ಸೌರಶಕ್ತಿ ನೀರಿನ ಹೀಟರು, ಸೌರಶಕ್ತಿ ದೀಪ ಇತ್ಯಾದಿಗಳನ್ನು ಪ್ರತಿ ವಿದ್ಯಾರ್ಥಿನಿಲಯಕ್ಕೆ ಒದಗಿಸಲಾಗುವುದು | ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ರವರು ಮಂಜೂರಾತಿ ನೀಡುವ ಪ್ರಾಧಿಕಾರ<br><br>ಜಿಲ್ಲಾಧಿಕಾರಿಗಳು / ಜಿ.ಸ.ಕ.ಅ / ತಾ.ಸ.ಕ.ಅ ಅನುಷ್ಠಾನ ಮಾಡುವ ಅಧಿಕಾರಿಗಳು<br><br>ಉಸ್ತುವಾರಿ ಮಾಡುವ ಅಧಿಕಾರಿ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ | ಕರ್ನಾಟಕ ಪಾರದರ್ಶಕ ಕಾಯ್ದೆಯಲ್ಲಿರುವ ಪ್ರಸ್ತುತ ನಿಯಮಗಳನ್ವಯ | ಟೆಂಡರ್ ದಾಖಲಾತಿಯಲ್ಲಿ ನಿಗದಿಪಡಿಸಿರುವಂತೆ | ಕಾರ್ಯಾದೇಶದಲ್ಲಿ ನಿಗದಿಪಡಿಸಿರುವಂತೆ | ಖರೀದಿಸಿ ವಿತರಿಸಿದ ಸಾಮಗ್ರಿಗಳ ಬಗ್ಗೆ ಯಾವುದೇ ದೂರುಗಳನ್ನು ಸಲ್ಲಿಸಲು / ಹೆಚ್ಚಿನ ಮಾಹಿತಿಗಾಗಿ ಜಿಲ್ಲಾಧಿಕಾರಿಗಳು / ಜಿ.ಸ.ಕ.ಅ ರವರನ್ನು ಸಂಪರ್ಕಿಸಬಹುದು<br><br>ಜಿಲ್ಲಾ ಮಟ್ಟದಲ್ಲಿ ಪರಿಹಾರ ದೊರಕದೆ ಇದ್ದಲ್ಲಿ ಆಯುಕ್ತರು / ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ರವರನ್ನು ಸಂಪರ್ಕಿಸಬಹುದು |
| 7 | ಅನುದಾನಿತ ಸಂಸ್ಥೆಗಳು ಕಟ್ಟಡ ನಿರ್ಮಾಣ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸಹಾಯಧನ | ಇಲಾಖೆಯಿಂದ ಮಾನ್ಯತೆ ಪಡೆದ ಸರ್ಕಾರೇತರ ಸಂಸ್ಥೆಗಳು ನಡೆಸುತ್ತಿರುವ ಅನುದಾನಿತ ವಿದ್ಯಾರ್ಥಿನಿಲಯಗಳಿಗೆ ಕಟ್ಟಡ ನಿಮಾಣ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಅಂದಾಜು ಮೊತ್ತದಲ್ಲಿ ಶೇ.75 ರಷ್ಟು ಅಥವಾ ಗರಿಷ್ಠ ರೂ.25.00 ಲಕ್ಷಗಳು, ಇದರಲ್ಲಿ ಯಾವುದು ಕಡಿಮೆಯೊ ಅದನ್ನು ಒದಗಿಸಲಾಗುವುದು | ಸರ್ಕಾರವು ಮಂಜೂರಾತಿ ನೀಡುವ ಪ್ರಾಧಿಕಾರ<br><br>ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮತ್ತು ಜಿ.ಸ.ಕ.ಅ ಅನುಷ್ಠಾನ ಮಾಡುವ ಅಧಿಕಾರಿಗಳು<br><br>ಉಸ್ತುವಾರಿ ಮಾಡುವ ಅಧಿಕಾರಿ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ | - | - | - | ಯಾವುದೇ ದೂರುಗಳನ್ನು ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮತ್ತು ಜಿ.ಸ.ಕ.ಅ ರವರಿಗೆ ಸಲ್ಲಿಸಬಹುದು<br><br>ಜಿಲ್ಲಾ ಮಟ್ಟದಲ್ಲಿ ಪರಿಹಾರ ದೊರಕದೆ ಇದ್ದಲ್ಲಿ ಆಯುಕ್ತರು / ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ರವರನ್ನು ಸಂಪರ್ಕಿಸಬಹುದು |

## ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ :

| ಕ್ರ. ಸಂ. | ಯೋಜನೆ / ಕಾರ್ಯಕ್ರಮದ ಹೆಸರು | ಯೋಜನೆ / ಕಾರ್ಯಕ್ರಮದ ಸಂಕ್ಷಿಪ್ತ ವಿವರ | ಮಂಜೂರು / ಅನುಷ್ಠಾನ / ಉಸ್ತುವಾರಿ ಮಾಡುವ ಪ್ರಾಧಿಕಾರ | ಅರ್ಹತಾ ಮಾನದಂಡ | ಅವಶ್ಯವಿರುವ ದಾಖಲಾತಿಗಳು | ಅರ್ಹತಾ ಅವಧಿ | ಷರಾ |
|---|---|---|---|---|---|---|---|
| ೮ | ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ | ಎಸ್.ಎಸ್.ಎಲ್.ಸಿ ಪರೀಕ್ಷಾ ಮಂಡಳಿ ನಡೆಸುವ ಪರೀಕ್ಷೆಯಲ್ಲಿ ಶೇ.60 ರಿಂದ ಶೇ.74.99 ಮತ್ತು ಶೇ.75 ಹಾಗೂ ಶೇ.75 ಕ್ಕಿಂತ ಹೆಚ್ಚಿನ ಅಂಕ ಪಡೆದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಕ್ರಮವಾಗಿ ರೂ.5,000/- ಮತ್ತು ರೂ.10,000/- ಗಳ ಇಲಾಖೆಯಿಂದ ಪ್ರೋತ್ಸಾಹಧನವನ್ನು ನೀಡಲಾಗುವುದು | ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ರವರು ಮಂಜೂರಾತಿ ನೀಡುವ ಪ್ರಾಧಿಕಾರ<br><br>ನಿರ್ದೇಶಕರು, ಎಸ್.ಎಸ್.ಎಲ್.ಸಿ ಪರೀಕ್ಷಾ ಮಂಡಳಿ / ಡಿ.ಡಿ.ಪಿ.ಐ / ಬಿ.ಇ.ಒ ಅನುಷ್ಠಾನಾಧಿಕಾರಿಗಳು<br><br>ಉಸ್ತುವಾರಿ ಮಾಡುವ ಅಧಿಕಾರಿ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ | - | - | - | ಅರ್ಹ ಪ.ಜಾತಿ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನವನ್ನು ಡಿ.ಡಿ / ಚೆಕ್ ಮೂಲಕ ಶಿಕ್ಷಣ ಇಲಾಖೆಯಿಂದ ನೇರವಾಗಿ ವಿತರಿಸಲಾಗುವುದು. |
| ೯ | ಪಿ.ಯು.ಸಿ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ | ಪದವಿ ಪೂರ್ವ ಪರೀಕ್ಷಾ ಮಂಡಳಿ ನಡೆಸುವ ಕಲೆ / ವಾಣಿಜ್ಯ / ವಿಜ್ಞಾನ ವಿಷಯಗಳ ಪರೀಕ್ಷೆಗಳಲ್ಲಿ ಶೇ.85 ಮತ್ತು ಇದಕ್ಕಿಂತ ಹೆಚ್ಚಿನ ಅಂಕ ಪಡೆದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಪ್ರತಿ ವಿಷಯಕ್ಕೆ ರೂ.10,000/- ದಂತೆ ಪ್ರತಿ ಜಿಲ್ಲೆಯಲ್ಲಿ ಮೊದಲ ಸ್ಥಾನದಲ್ಲಿರುವ 5 ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನವನ್ನು ನೀಡಲಾಗುವುದು. | ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ರವರು ಮಂಜೂರಾತಿ ನೀಡುವ ಪ್ರಾಧಿಕಾರ<br><br>ನಿರ್ದೇಶಕರು, ಪದವಿ ಪೂರ್ವ ಪರೀಕ್ಷಾ ಮಂಡಳಿ / ಡಿ.ಡಿ.ಪಿ.ಯು ಅನುಷ್ಠಾನಾಧಿಕಾರಿಗಳು<br><br>ಉಸ್ತುವಾರಿ ಮಾಡುವ ಅಧಿಕಾರಿ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ | - | - | - | ಅರ್ಹ ಪ.ಜಾತಿ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನವನ್ನು ಡಿ.ಡಿ / ಚೆಕ್ ಮೂಲಕ ಶಿಕ್ಷಣ ಇಲಾಖೆಯಿಂದ ನೇರವಾಗಿ ವಿತರಿಸಲಾಗುವುದು. |

| ಕ್ರ. ಸಂ. | ಯೋಜನೆ / ಕಾರ್ಯಕ್ರಮದ ಹೆಸರು | ಯೋಜನೆ / ಕಾರ್ಯಕ್ರಮದ ಸಂಕ್ಷಿಪ್ತ ವಿವರ | ಮಂಜೂರು / ಅನುಷ್ಠಾನ / ಉಸ್ತುವಾರಿ ಮಾಡುವ ಪ್ರಾಧಿಕಾರ | ಅರ್ಹತಾ ಮಾನದಂಡ | ಅವಶ್ಯವಿರುವ ದಾಖಲಾತಿಗಳು | ಅರ್ಹತಾ ಅವಧಿ | ಷರಾ |
|---|---|---|---|---|---|---|---|
| 10 | ಪದವಿ ಪರೀಕ್ಷೆಯಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ | ಅಂತಿಮ ವರ್ಷದ ಪದವಿ ಪರೀಕ್ಷೆಯ ಪ್ರತಿ ವಿಷಯದಲ್ಲಿ 1 ರಿಂದ 5ನೇ ರ್‍ಯಾಂಕ್ ಪಡೆದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ರೂ.20,000/- ದಂತೆ ಪ್ರೋತ್ಸಾಹಧನವನ್ನು ನೀಡಲಾಗುವುದು. | ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ರವರು ಮಂಜೂರಾತಿ / ಅನುಷ್ಠಾನ / ಉಸ್ತುವಾರಿ ಮಾಡುವ ಪ್ರಾಧಿಕಾರ | ರ್‍ಯಾಂಕ್ ಪಡೆದ ವಿದ್ಯಾರ್ಥಿಗಳು (ವಿಷಯವಾರು) | ಅಂತಿಮ ಪದವಿ ಪರೀಕ್ಷೆಯ ಅಂಕ ಪಟ್ಟಿ / ರ್‍ಯಾಂಕ್ ಪ್ರಮಾಣ ಪತ್ರ / ಜಾತಿ ಪ್ರಮಾಣ ಪತ್ರ / ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರಿಂದ ದೃಢೀಕರಣ ಪತ್ರ | - | ಅರ್ಹ ಅಭ್ಯರ್ಥಿಗಳು ಅರ್ಜಿಯನ್ನು ನಿಗದಿತ ನಮೂನೆಯಲ್ಲಿ ಸಂಬಂಧಪಟ್ಟ ವಿಶ್ವವಿದ್ಯಾನಿಲಯ / ಸಂಸ್ಥೆಗಳ ಮೂಲಕ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ರವರಿಗೆ ಸಲ್ಲಿಸುವುದು.<br><br>ಅರ್ಹ ಅಭ್ಯರ್ಥಿಗಳಿಗೆ ಪ್ರೋತ್ಸಾಹಧನವನ್ನು ವಿದ್ಯುನ್ಮಾನ ವರ್ಗಾವಣೆ (ಆರ್.ಟಿ.ಜಿ.ಎಸ್) ಮೂಲಕ ಅಭ್ಯರ್ಥಿಗಳ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗುವುದು. |
| 11 | ಸ್ನಾತಕೋತ್ತರ ಪದವಿ ಪರೀಕ್ಷೆಯಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ | ಅಂತಿಮ ವರ್ಷದ ಸ್ನಾತಕೋತ್ತರ ಪದವಿ ಪರೀಕ್ಷೆಯ ಪ್ರತಿ ವಿಷಯದಲ್ಲಿ 1 ರಿಂದ 5ನೇ ರ್‍ಯಾಂಕ್ ಪಡೆದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ರೂ.25,000/- ದಂತೆ ಪ್ರೋತ್ಸಾಹಧನವನ್ನು ನೀಡಲಾಗುವುದು. | ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ರವರು ಮಂಜೂರಾತಿ / ಅನುಷ್ಠಾನ / ಉಸ್ತುವಾರಿ ಮಾಡುವ ಪ್ರಾಧಿಕಾರ | ರ್‍ಯಾಂಕ್ ಪಡೆದ ವಿದ್ಯಾರ್ಥಿಗಳು (ವಿಷಯವಾರು) | ಅಂತಿಮ ಸ್ನಾತಕೋತ್ತರ ಪದವಿ ಪರೀಕ್ಷೆಯ ಅಂಕ ಪಟ್ಟಿ / ರ್‍ಯಾಂಕ್ ಪ್ರಮಾಣ ಪತ್ರ / ಜಾತಿ ಪ್ರಮಾಣ ಪತ್ರ / ಸಂಬಂಧಪಟ್ಟ ವಿಶ್ವವಿದ್ಯಾನಿಲಯ ದಿಂದ ದೃಢೀಕರಣ ಪತ್ರ | - | ಅರ್ಹ ಅಭ್ಯರ್ಥಿಗಳು ಅರ್ಜಿಯನ್ನು ನಿಗದಿತ ನಮೂನೆಯಲ್ಲಿ ಸಂಬಂಧಪಟ್ಟ ವಿಶ್ವವಿದ್ಯಾನಿಲಯ / ಸಂಸ್ಥೆಗಳ ಮೂಲಕ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ರವರಿಗೆ ಸಲ್ಲಿಸುವುದು.<br><br>ಅರ್ಹ ಅಭ್ಯರ್ಥಿಗಳಿಗೆ ಪ್ರೋತ್ಸಾಹಧನವನ್ನು ವಿದ್ಯುನ್ಮಾನ ವರ್ಗಾವಣೆ (ಆರ್.ಟಿ.ಜಿ.ಎಸ್) ಮೂಲಕ ಅಭ್ಯರ್ಥಿಗಳ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗುವುದು. |

| ಕ್ರ. ಸಂ. | ಯೋಜನೆ / ಕಾರ್ಯಕ್ರಮದ ಹೆಸರು | ಯೋಜನೆ / ಕಾರ್ಯಕ್ರಮದ ಸಂಕ್ಷಿಪ್ತ ವಿವರ | ಮಂಜೂರು / ಅನುಷ್ಠಾನ / ಉಸ್ತುವಾರಿ ಮಾಡುವ ಪ್ರಾಧಿಕಾರ | ಅರ್ಹತಾ ಮಾನದಂಡ | ಅವಶ್ಯವಿರುವ ದಾಖಲಾತಿಗಳು | ಅರ್ಹತಾ ಅವಧಿ | ಷರಾ |
|---|---|---|---|---|---|---|---|
| 12 | ವೃತ್ತಿಪರ ಕೋರ್ಸ್‌ಗಳಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ | ಇಂಜಿನಿಯರಿಂಗ್ / ದಂತ / ಭಾರತೀಯ ವೈದ್ಯಕೀಯ ಕೋರ್ಸ್‌ಗಳಲ್ಲಿ 1 ರಿಂದ 5ನೇ ರ್‍ಯಾಂಕ್ ಗಳಿಸಿದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳು ರೂ.25,000/-ಗಳ ಪ್ರೋತ್ಸಾಹಧನವನ್ನು ಪಡೆಯಲು ಅರ್ಹರಿರುತ್ತಾರೆ. | ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ರವರು ಮಂಜೂರಾತಿ / ಅನುಷ್ಠಾನ / ಉಸ್ತುವಾರಿ ಮಾಡುವ ಪ್ರಾಧಿಕಾರ | ರ್‍ಯಾಂಕ್ ಪಡೆದ ವಿದ್ಯಾರ್ಥಿಗಳು (ಇಂಜಿನಿಯರಿಂಗ್ / ದಂತ / ಭಾರತೀಯ ವೈದ್ಯಕೀಯ ಕೋರ್ಸ್‌ಗಳಲ್ಲಿ) | ಅಂತಿಮ ವರ್ಷದ ಪರೀಕ್ಷೆಯ ಅಂಕ ಪಟ್ಟಿ / ರ್‍ಯಾಂಕ್ ಪ್ರಮಾಣ ಪತ್ರ / ಜಾತಿ ಪ್ರಮಾಣ ಪತ್ರ / ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರಿಂದ ದೃಢೀಕರಣ ಪತ್ರ | - | ಅರ್ಹ ಅಭ್ಯರ್ಥಿಗಳು ಅರ್ಜಿಯನ್ನು ನಿಗದಿತ ನಮೂನೆಯಲ್ಲಿ ಸಂಬಂಧಪಟ್ಟ ವಿಶ್ವವಿದ್ಯಾನಿಲಯ / ಸಂಸ್ಥೆಗಳ ಮೂಲಕ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ರವರಿಗೆ ಸಲ್ಲಿಸುವುದು.<br><br>ಅರ್ಹ ಅಭ್ಯರ್ಥಿಗಳಿಗೆ ಪ್ರೋತ್ಸಾಹಧನವನ್ನು ವಿದ್ಯುನ್ಮಾನ ವರ್ಗಾವಣೆ (ಆರ್.ಟಿ.ಜಿ.ಎಸ್) ಮೂಲಕ ಅಭ್ಯರ್ಥಿಗಳ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗುವುದು. |
| | | ವೈದ್ಯಕೀಯ ವಿಭಾಗದಲ್ಲಿ ರ್‍ಯಾಂಕ್ ಪಡೆದ ಪ.ಜಾತಿಯ ವಿದ್ಯಾರ್ಥಿಗಳಿಗೆ ರೂ.35,000/-ಗಳ ಪ್ರೋತ್ಸಾಹಧನವನ್ನು ನೀಡಲಾಗುವುದು. | ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ರವರು ಮಂಜೂರಾತಿ / ಅನುಷ್ಠಾನ / ಉಸ್ತುವಾರಿ ಮಾಡುವ ಪ್ರಾಧಿಕಾರ | ರ್‍ಯಾಂಕ್ ಪಡೆದ ವಿದ್ಯಾರ್ಥಿಗಳು ವೈದ್ಯಕೀಯ ಕೋರ್ಸ್‌ನಲ್ಲಿ) | ಅಂತಿಮ ವರ್ಷದ ಪರೀಕ್ಷೆಯ ಅಂಕ ಪಟ್ಟಿ / ರ್‍ಯಾಂಕ್ ಪ್ರಮಾಣ ಪತ್ರ / ಜಾತಿ ಪ್ರಮಾಣ ಪತ್ರ / ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರಿಂದ ದೃಢೀಕರಣ ಪತ್ರ | | |
| 13 | ಪ್ರತಿಷ್ಠಿತ ಸಂಸ್ಥೆಗಳಾದ ಐ.ಐ.ಟಿ / ಐ.ಐ.ಎಂ / ಐ.ಐ.ಎಸ್.ಸಿ / ಎನ್.ಐ.ಟಿ ಯಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಸಹಾಯಧನ | ಪ್ರತಿಷ್ಠಿತ ಸಂಸ್ಥೆಗಳಾದ ಐ.ಐ.ಟಿ / ಐ.ಐ.ಎಂ / ಐ.ಐ.ಎಸ್.ಸಿ / ಎನ್.ಐ.ಟಿ ಯಲ್ಲಿ ಪ್ರವೇಶ ಪಡೆದ ಪ.ಜಾತಿಯ ವಿದ್ಯಾರ್ಥಿಗಳಿಗೆ ರೂ. 1.00 ಲಕ್ಷಗಳ ಸಹಾಯಧನ ಅಥವಾ ಪಾವತಿಸಬೇಕಾದ ಕಡ್ಡಾಯ ಶುಲ್ಕ ಮತ್ತು ಭೋಜನ ವೆಚ್ಚ ಇದರಲ್ಲಿ ಯಾವುದು ಕಡಿಮೆಯೊ ಅದನ್ನು ಒಂದು ಬಾರಿಗೆ ಪೂರ್ಣ ಕೋರ್ಸ್ ಅವಧಿಗೆ ಪಾವತಿಸಲಾಗುವುದು | ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ರವರು ಮಂಜೂರಾತಿ / ಅನುಷ್ಠಾನ / ಉಸ್ತುವಾರಿ ಮಾಡುವ ಪ್ರಾಧಿಕಾರ | ಪ್ರತಿಷ್ಠಿತ ಸಂಸ್ಥೆಗಳಲ್ಲಿ ಪ್ರವೇಶ ಪಡೆದ ಮತ್ತು ಭಾರತ ಸರ್ಕಾರದ ವಿದ್ಯಾರ್ಥಿವೇತನಕ್ಕೆ ಅರ್ಹರಿಲ್ಲದ ವಿದ್ಯಾರ್ಥಿಗಳಿಗೆ | ಆಯ್ಕೆಯಾದ ವಿದ್ಯಾರ್ಥಿಗಳು ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾದ ಪ್ರಮಾಣ ಪತ್ರ, ಸಂಸ್ಥೆಯ ಮುಖ್ಯಸ್ಥರಿಂದ ದೃಢೀಕರಣ ಪತ್ರ, ಶುಲ್ಕ ಪಾವತಿಸಿದ ರಸೀದಿ | ಅನುದಾನವನ್ನು 30 ದಿನಗಳೊಳಗಾಗಿ ಬಿಡುಗಡೆ ಮಾಡಲಾಗುವುದು | ಅರ್ಹ ಅಭ್ಯರ್ಥಿಗಳು ಅರ್ಜಿಯನ್ನು ನಿಗದಿತ ನಮೂನೆಯಲ್ಲಿ ಸಂಬಂಧಪಟ್ಟ ಸಂಸ್ಥೆಗಳ ಮೂಲಕ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ರವರಿಗೆ ಸಲ್ಲಿಸುವುದು.<br><br>ಅರ್ಹ ಅಭ್ಯರ್ಥಿಗಳಿಗೆ ಸಹಾಯಧನವನ್ನು ವಿದ್ಯುನ್ಮಾನ ವರ್ಗಾವಣೆ (ಆರ್.ಟಿ.ಜಿ.ಎಸ್) ಮೂಲಕ ಅಭ್ಯರ್ಥಿಗಳ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗುವುದು.<br><br>ದೂರುಗಳು ಇದ್ದಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ರವರನ್ನು ಸಂಪರ್ಕಿಸಬಹುದು |

| ಕ್ರ. ಸಂ. | ಯೋಜನೆ / ಕಾರ್ಯಕ್ರಮದ ಹೆಸರು | ಯೋಜನೆ / ಕಾರ್ಯಕ್ರಮದ ಸಂಕ್ಷಿಪ್ತ ವಿವರ | ಮಂಜೂರು / ಅನುಷ್ಠಾನ / ಉಸ್ತುವಾರಿ ಮಾಡುವ ಪ್ರಾಧಿಕಾರ | ಅರ್ಹತಾ ಮಾನದಂಡ | ಅವಶ್ಯವಿರುವ ದಾಖಲಾತಿಗಳು | ಅರ್ಹತಾ ಅವಧಿ | ಷರಾ |
|---|---|---|---|---|---|---|---|
| 14 | ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ರಾಮಕೃಷ್ಣ ಆಶ್ರಮ, ಮೈಸೂರು ದಂತಹ ಪ್ರತಿಷ್ಠಿತ ಶಾಲೆಗಳಲ್ಲಿ ಪ್ರವೇಶ ನೀಡಿ ಶುಲ್ಕ ಪಾವತಿಸುವುದು | ಪ್ರವೇಶ ಪರೀಕ್ಷೆಯ ಮೂಲಕ ಜಿಲ್ಲಾ ಮಟ್ಟದಲ್ಲಿ ಪ್ರತಿಷ್ಠಿತ ಶಾಲೆಗಳಿಗೆ ಆಯ್ಕೆಯಾಗಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ನಿಗದಿಪಡಿಸಿದ ಶುಲ್ಕವನ್ನು ಪಾವತಿಸಲಾಗುವುದು | ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ರವರು ಮಂಜೂರಾತಿ ನೀಡುವ ಪ್ರಾಧಿಕಾರ<br><br>ಜಿಲ್ಲಾಧಿಕಾರಿಗಳು, ಜಿ.ಸ.ಕ.ಅ ರವರು ಅನುಷ್ಠಾನಾಧಿಕಾರಿಗಳು<br><br>ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ರವರು ಉಸ್ತುವಾರಿ ಪ್ರಾಧಿಕಾರ | - | - | - | ಪಾವತಿಸಬೇಕಾದ ಶುಲ್ಕಗಳನ್ನು ವಿದ್ಯುನ್ಮಾನ ವರ್ಗಾವಣೆ (ಆರ್.ಟಿ.ಜಿ.ಎಸ್) ಮೂಲಕ ಸಂಸ್ಥೆಗಳಿಗೆ ನೀಡಲಾಗುವುದು |
| 15 | ಹೊಸ ಅನುದಾನಿತ ವಿದ್ಯಾರ್ಥಿನಿಲಯಗಳಿಗೆ ಅನುದಾನ ಬಿಡುಗಡೆ | ಪರಿಶಿಷ್ಟ ಜಾತಿಯ ಆಡಳಿತ ಮಂಡಳಿಯವರು ನಡೆಸುತ್ತಿರುವ ಸರ್ಕಾರೇತರ ಸಂಸ್ಥೆಗಳು ಮತ್ತು ಇತರೆ ಸಂಸ್ಥೆಗಳು ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಿ ಕಾರ್ಯ ನಿರ್ವಹಿಸುತ್ತಿರುವುದನ್ನು ಉತ್ತೇಜಿಸುವ ಸಲುವಾಗಿ ವಿದ್ಯಾರ್ಥಿನಿಲಯಗಳ ನಿರ್ವಹಣೆಗಾಗಿ ಅನುದಾನ ಬಿಡುಗಡೆ | ಸರ್ಕಾರವು ಮಂಜೂರಾತಿ ನೀಡುವ ಪ್ರಾಧಿಕಾರ<br><br>ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮತ್ತು ಜಿ.ಸ.ಕ.ಅ ರವರು ಅನುಷ್ಠಾನಾಧಿಕಾರಿಗಳು | ಸರ್ಕಾರೇತರ ಸಂಸ್ಥೆಗಳು ಸರ್ಕಾರದಿಂದ ಮುಂಚಿತವಾಗಿ ಅನುಮತಿ ಪಡೆದಿರಬೇಕು ಮತ್ತು ಸ್ವಂತ ಹಣದಿಂದ ಸಂಸ್ಥೆಯನ್ನು 2 ವರ್ಷಗಳ ಕಾಲ ಯಶ್ವಸಿಯಾಗಿ ನಡೆಸಿರಬೇಕು | ಸರ್ಕಾರದ ಅನುಮತಿ ಪತ್ರ, ವಾರ್ಷಿಕ ವರದಿ, ಆಡಿಟ್ ವರದಿ, ಸರ್ಕಾರೇತರ ಸಂಸ್ಥೆಗಳ ಆಡಳಿತ ಮಂಡಳಿ ಸಭೆ ನಡವಳಿ, ಉಪನಿಯಮ, ನೊಂದಣಿ ಮತ್ತು ನವೀಕರಣ ಪ್ರಮಾಣ ಪತ್ರ, ಮಂಡಳಿ ಸದಸ್ಯರ ಪಟ್ಟಿ, ತರಗತಿವಾರು ವಿದ್ಯಾರ್ಥಿಗಳ ಪಟ್ಟಿ | 15 ದಿನಗಳೊಳಗಾಗಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಲಾಗುವುದು | ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ರವರು ಅನುದಾನವನ್ನು ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ರವರಿಗೆ ವಿದ್ಯುನ್ಮಾನ ವರ್ಗಾವಣೆ (ಆರ್.ಟಿ.ಜಿ.ಎಸ್) ಮೂಲಕ ಬಿಡುಗಡೆ ಮಾಡಲಾಗುವುದು<br><br>ದೂರುಗಳು ಇದ್ದಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ರವರನ್ನು ಸಂಪರ್ಕಿಸಬಹುದು |

## ಜಿಲ್ಲಾ ವಲಯ :

| ಕ್ರ. ಸಂ. | ಯೋಜನೆ / ಕಾರ್ಯಕ್ರಮದ ಹೆಸರು | ಯೋಜನೆ / ಕಾರ್ಯಕ್ರಮದ ಸಂಕ್ಷಿಪ್ತ ವಿವರ | ಮಂಜೂರು / ಅನುಷ್ಠಾನ / ಉಸ್ತುವಾರಿ ಮಾಡುವ ಪ್ರಾಧಿಕಾರ | ಅರ್ಹತಾ ಮಾನದಂಡ | ಅವಶ್ಯವಿರುವ ದಾಖಲಾತಿಗಳು | ಅರ್ಹತಾ ಅವಧಿ | ಷರಾ |
|---|---|---|---|---|---|---|---|
| 16 | 1 ರಿಂದ 5ನೇ ತರಗತಿವರೆಗಿನ ವಸತಿ ಶಾಲೆಗಳ ನಿರ್ವಹಣೆ | 1 ರಿಂದ 5ನೇ ತರಗತಿವರೆಗಿನ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳು ವಸತಿ ಶಾಲೆಗಳಲ್ಲಿ ಈಗಾಗಲೇ ಪ್ರವೇಶ ಪಡೆದವರಿಗೆ ಉಚಿತ ಶಿಕ್ಷಣ, ವಸತಿ ಮತ್ತು ಊಟದ ವೆಚ್ಚವನ್ನು ನೀಡಲಾಗುವುದು.<br><br>ಪರಿಶಿಷ್ಟ ಜಾತಿ ಜನರು ಹೆಚ್ಚಾಗಿ ವಾಸಿಸುತ್ತಿರುವ ಪ್ರದೇಶಗಳಲ್ಲಿ 68 ವಸತಿ ಶಾಲೆಗಳು 125 ಸಂಖ್ಯಾಬಲದೊಂದಿಗೆ ಕಾರ್ಯನಿರ್ವಹಿಸುತ್ತಿದೆ. | ಅನುಷ್ಠಾನಾಧಿಕಾರಿ ತಾ.ಸ.ಕ.ಅ<br><br>ಉಸ್ತುವಾರಿ ಅಧಿಕಾರಿ ಜಿ.ಸ.ಕ.ಅ | 5½ ವರ್ಷ ವಯೋಮಿತಿ ಯಲ್ಲಿರಬೇಕು ಮತ್ತು ಪರಿಶಿಷ್ಟ ಜಾತಿಗೆ ಸೇರಿದವ ರಾಗಿರಬೇಕು | ಜನನ ಮತ್ತು ಜಾತಿ ಪ್ರಮಾಣ ಪತ್ರಗಳು | - | ದೂರುಗಳು ಇದ್ದಲ್ಲಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ / ಜಿ.ಸ.ಕ.ಅ ರವರಿಗೆ ಸಲ್ಲಿಸಬಹುದು<br><br>ಜಿಲ್ಲಾ ಮಟ್ಟದಲ್ಲಿ ಪರಿಹಾರ ದೊರಕದೆ ಇದ್ದಲ್ಲಿ ಆಯುಕ್ತರು / ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ರವರನ್ನು ಸಂಪರ್ಕಿಸಬಹುದು |
| 17 | ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಪ್ರವೇಶ ಮತ್ತು ಇದರ ನಿರ್ವಹಣೆ | ಪರಿಶಿಷ್ಟ ಜಾತಿಯ ಕಾಲೇಜು ವಿದ್ಯಾರ್ಥಿಗಳು 5 ರಿಂದ 7 ಕಿ.ಮೀ ದೂರದಲ್ಲಿ ವಾಸಿಸುತ್ತಿರುವ ಮತ್ತು ಪೋಷಕರ ವಾರ್ಷಿಕ ಆದಾಯ ರೂ.2.00 ಲಕ್ಷಕ್ಕಿಂತ ಕಡಿಮೆಯಿರುವ ವಿದ್ಯಾರ್ಥಿಗಳಿಗೆ ಊಟ ಮತ್ತು ವಸತಿ ಸೌಕರ್ಯವನ್ನು ಒದಗಿಸಲಾಗುವುದು. | ಅನುಷ್ಠಾನ ಮತ್ತು ಉಸ್ತುವಾರಿ ಅಧಿಕಾರಿ ತಾ.ಸ.ಕ.ಅ<br><br>ಅರ್ಜಿಯನ್ನು ತಾ.ಸ.ಕ.ಅ ಕಛೇರಿಯಿಂದ ಪಡೆಯತಕ್ಕದ್ದು | ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ಆದಾಯ ರೂ.2.00 ಲಕ್ಷಕ್ಕಿಂತ ಕಡಿಮೆ ಇರಬೇಕು.<br><br>ಅರ್ಹ ಪ.ಜಾತಿ ವಿದ್ಯಾರ್ಥಿಗಳನ್ನು ಮಾನ್ಯ ವಿಧಾನಸಭಾ ಸದಸ್ಯರು ಅರ್ಹತೆ ಆಧಾರದ ಮೇಲೆ ವಿದ್ಯಾರ್ಥಿನಿಲಯಗ ಳಿಗೆ ಪ್ರವೇಶ ನೀಡಲಾಗುವುದು | ಅರ್ಜಿ, ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳು, ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ಅಂಕ ಪಟ್ಟಿ, ಪ್ರಮಾಣ ನಡತೆ ಪ್ರಮಾಣ ಪತ್ರ, ದೂರ ಪ್ರಮಾಣ ಪತ್ರ, .ಕಾಲೇಜು ಪ್ರಾಂಶುಪಾಲರಿಂದ ದೃಢೀಕರಣ ಪತ್ರ | ಜೂನ್ / ಜುಲೈ ತಿಂಗಳಿನಲ್ಲಿ ಪ್ರವೇಶ ನೀಡಲಾಗುವುದು | ಯಾವುದೇ ದೂರುಗಳನ್ನು ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ / ಜಿ.ಸ.ಕ.ಅ ರವರಿಗೆ ಸಲ್ಲಿಸಬಹುದು<br><br>ಜಿಲ್ಲಾ ಮಟ್ಟದಲ್ಲಿ ಪರಿಹಾರ ದೊರಕದೆ ಇದ್ದಲ್ಲಿ ಆಯುಕ್ತರು / ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ರವರನ್ನು ಸಂಪರ್ಕಿಸಬಹುದು |

| ಕ್ರ. ಸಂ. | ಯೋಜನೆ / ಕಾರ್ಯಕ್ರಮದ ಹೆಸರು | ಯೋಜನೆ / ಕಾರ್ಯಕ್ರಮದ ಸಂಕ್ಷಿಪ್ತ ವಿವರ | ಮಂಜೂರು / ಅನುಷ್ಠಾನ / ಉಸ್ತುವಾರಿ ಮಾಡುವ ಪ್ರಾಧಿಕಾರ | ಅರ್ಹತಾ ಮಾನದಂಡ | ಅವಶ್ಯವಿರುವ ದಾಖಲಾತಿಗಳು | ಅರ್ಹತಾ ಅವಧಿ | ಷರಾ |
|---|---|---|---|---|---|---|---|
| 18 | ಬಹುಮಾನ ಹಣ ಮಂಜೂರಾತಿ | ಪರಿಶಿಷ್ಟ ಜಾತಿ ಕಾಲೇಜು ವಿದ್ಯಾರ್ಥಿಗಳಿಗೆ ಅಂತಿಮ ವಾರ್ಷಿಕ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಪ್ರಥಮ ಬಾರಿಗೆ ಉತ್ತೀರ್ಣರಾದವರಿಗೆ ಬಹುಮಾನ ಹಣ ಮಂಜೂರು ಮಾಡಲಾಗುವುದು..<br>ದ್ವಿತೀಯ ಪಿ.ಯು.ಸಿ ವಿದ್ಯಾರ್ಥಿಗಳಿಗೆ ರೂ.750/-, ಪದವಿ ವಿದ್ಯಾರ್ಥಿಗಳಿಗೆ ರೂ.1,000/-, ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ರೂ.1,250/- ಮತ್ತು ವೃತ್ತಿ ಶಿಕ್ಷಣ ವಿದ್ಯಾರ್ಥಿಗಳಿಗೆ ರೂ.1,500/- ರಂತೆ ಬಹುಮಾನ ಹಣವನ್ನು ಮಂಜೂರು ಮಾಡಲಾಗುವುದು. | ಮಂಜೂರು ಮಾಡುವ ಮತ್ತು ಅನುಷ್ಠಾನಾಧಿಕಾರಿಗಳು ಜಿ.ಸ.ಕ.ಅ<br><br>ಅರ್ಜಿಯನ್ನು ಜಿ.ಸ.ಕ.ಅ ಕಛೇರಿಯಿಂದ ಪಡೆಯತಕ್ಕದ್ದು | ಅಂತಿಮ ವಾರ್ಷಿಕ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಪ್ರಥಮ ಬಾರಿಗೆ ಉತ್ತೀರ್ಣರಾದ ಪ.ಜಾತಿಯ ವಿದ್ಯಾರ್ಥಿಗಳಿಗೆ | ಜಾತಿ ಪ್ರಮಾಣ ಪತ್ರ, ಹಿಂದಿನ ವರ್ಷದ ಅಂಕಪಟ್ಟಿ, ಕಾಲೇಜು ಪ್ರಾಂಶುಪಾಲರಿಂದ ದೃಢೀಕರಣ ಪತ್ರ | - | ಯಾವುದೇ ದೂರುಗಳನ್ನು ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ / ಜಿ.ಸ.ಕ.ಅ ರವರಿಗೆ ಸಲ್ಲಿಸಬಹುದು<br><br>ಜಿಲ್ಲಾ ಮಟ್ಟದಲ್ಲಿ ಪರಿಹಾರ ದೊರಕದೆ ಇದ್ದಲ್ಲಿ ಆಯುಕ್ತರು / ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ರವರನ್ನು ಸಂಪರ್ಕಿಸಬಹುದು |
| 19 | ತಾಂತ್ರಿಕ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪ.ಜಾತಿಯ ವಿದ್ಯಾರ್ಥಿಗಳಿಗೆ ಇತರೆ ರಿಯಾಯಿತಿಗಳು | ತಾಂತ್ರಿಕ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪ.ಜಾತಿಯ ಪ್ರತಿ ವಿದ್ಯಾರ್ಥಿಗೆ ರೂ.700/- ಗಳಿಗೆ **Scientific Calculators, Mini Drafter** ಸಲಕರಣೆಗಳನ್ನು ಗಳನ್ನು ಕೋರ್ಸ್‌ನ ಪ್ರಾರಂಭದಲ್ಲಿ ನೀಡಲಾಗುವುದು. | ಜಿ.ಸ.ಕ.ಅ ರವರು ಮಂಜೂರಾತಿ / ಅನುಷ್ಠಾನ / ಉಸ್ತುವಾರಿ ಮಾಡುವ ಅಧಿಕಾರಿಗಳು<br><br>ಜಿ.ಅ.ಕ.ಅ ರವರು ಪ.ಜಾತಿ ವಿದ್ಯಾರ್ಥಿಗಳ ಪಟ್ಟಿಯನ್ನು ಸಂಬಂಧಿಸಿದ ಕಾಲೇಜುಗಳಿಂದ ಪಡೆಯಲಾಗುವುದು | ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿ ದಾಖಲಾದ ಪ.ಜಾತಿಯ ವಿದ್ಯಾರ್ಥಿಗಳು | ಜಾತಿ ಪ್ರಮಾಣ ಪತ್ರ, ಹಿಂದಿನ ವರ್ಷದ ಅಂಕಪಟ್ಟಿ, ಕಾಲೇಜು ಪ್ರಾಂಶುಪಾಲರಿಂದ ದೃಢೀಕರಣ ಪತ್ರ | - | ಜಿ.ಸ.ಕ.ಅ ರವರು ಮಂಜೂರಾತಿ / ಅನುಷ್ಠಾನ / ಉಸ್ತುವಾರಿ ಮಾಡುವ ಅಧಿಕಾರಿಗಳು |

| ಕ್ರ. ಸಂ. | ಯೋಜನೆ / ಕಾರ್ಯಕ್ರಮದ ಹೆಸರು | ಯೋಜನೆ / ಕಾರ್ಯಕ್ರಮದ ಸಂಕ್ಷಿಪ್ತ ವಿವರ | ಮಂಜೂರು / ಅನುಷ್ಠಾನ / ಉಸ್ತುವಾರಿ ಮಾಡುವ ಪ್ರಾಧಿಕಾರ | ಅರ್ಹತಾ ಮಾನದಂಡ | ಅವಶ್ಯವಿರುವ ದಾಖಲಾತಿಗಳು | ಅರ್ಹತಾ ಅವಧಿ | ಷರಾ |
|---|---|---|---|---|---|---|---|
